# ಮಹಿಳಾ ವಿಶೇಷ

## MAHILA VISHESHA

RNI No. KARKAN/2015/71642

ಕನ್ನಡ ತಿಂಗಳ ಪತ್ರಿಕೆ KANNADA MONTHLY ಸೆಪ್ಟಂಬರ್ September 1-30 -2018

Vol: 4 Issue : 1 (37) Pages : 16 Price: Rs.10/-
ಸಂಪುಟ: 4 ಸಂಚಿಕೆ: 1 ಪುಟ : 16 ಬೆಲೆ: ರೂ. 10/–

ಸಂಪಾದಕರು: ಹೆಚ್.ವಿ. ವೆಂಕಟಸುಬ್ಬರಾವ್ ಮೊಬೈಲ್ 8880334444/9243584444




ಒಳ ಪುಟಗಳಲ್ಲಿ....

ಪತ್ರಗಳ ಮಾಹಿತಿ– ದಾಳಿಂಬೆ 2
ಸ್ವರ್ಣಗೌರಿ ವ್ರತ 4
ಗಣಪತಿ ಪೂಜಾಮಹಾತ್ಮ್ಯೆ 7
ಆಧ್ಯಾತ್ಮ ಗಣಿತ ಚಮತ್ಕಾರ 10
ಜೀವಕ್ಕೆ ಆಯಸ್ಸು ತುಂಬುವುದಕ್ಕಿಂತ... 12
ಸ್ತ್ರೀ ಪುರುಷರಲ್ಲಿನ ಸ್ವಭಾವಜನ್ಯ ವ್ಯತ್ಯಾಸಗಳು 14
ಬೆಳಗಲಿ ಭಾರತ 16




ಶ್ರೀಕೃಷ್ಣ ಜನ್ಮಾಷ್ಟಮಿ, ಉಪಕರ್ಮ, ಸ್ವರ್ಣಗೌರಿ ವ್ರತ, ವರಸಿದ್ಧಿವಿನಾಯಕ ವ್ರತ, ವಿಶ್ವಕರ್ಮ ಜಯಂತಿ, ಮೊಹರಂ ಕಡೇದಿನ, ಅನಂತ ಪದ್ಮನಾಭ ವ್ರತ ಹಬ್ಬದ ಪ್ರಯುಕ್ತ ಎಲ್ಲಾ ಓದುಗರಿಗೂ ಶುಭಾಶಯಗಳು

# 21 ಪತ್ರೆಗಳ ಮಾಹಿತಿ



ಗಣೇಶ ಚತುರ್ಥಿಯ ಶುಭಾಶಯಗಳು. ಗಣೇಶನ ಪೂಜೆಯನ್ನು ಮಾಡುವಾಗ ಅರ್ಚನೆಯಲ್ಲಿ 21 ಬಗೆಯ ಪತ್ರೆ ಅಥವಾ ಎಲೆಗಳ ವಿಧ್ಯುಕ್ತ ಪಾತ್ರವಿದೆ. ಇವು ಔಷಧಿಯ ಗುಣಗಳಿಂದಲೂ ಕೂಡಿದ್ದು, ಆಯುರ್ವೇದದಂಥ ಪ್ರಾಚೀನ ವೈದ್ಯ ಪದ್ಧತಿಯಲ್ಲಿ ಇಂದಿಗೂ ಪರಿಣಾಮಕಾರಿಯಾಗಿ ಬಳಕೆಯಾಗುತ್ತಿವೆ. ವೇದ–ಪುರಾಣ–ಜಾನಪದ ಕಥನ ರಾಶಿಯಲ್ಲಿ ಇವುಗಳ ಉಲ್ಲೇಖಗಳು ಹೇರಳವಾಗಿವೆ. ಒಂದೊಂದೇ ಪತ್ರೆಗಳ ಮಾಹಿತಿಯನ್ನು ನೀಡುವುದೇ ನಮ್ಮ ಉದ್ದೇಶವಾಗಿದೆ.

## 14. ದಾಳಿಂಬೆ

ದಾಳಿಂಬೆಯ ತವರೂರು ಇರಾನ್ ವರಾಹ ಮಿಹಿರನ (17ನೇ ಶತಮಾನ) 'ಬೃಹತ್ ಸಂಹಿತೆ'ಯಲ್ಲಿ ಇದರ ಉಲ್ಲೇಖವಿದೆ. ಈಜಿಪ್ಟ್, ಸಿರಿಯಾಗಳಲ್ಲಿ ದಾಳಿಂಬೆ ಪವಿತ್ರತೆಯ ಸಂಕೇತವಾದ್ದರಿಂದ ಅಲ್ಲಿನ ಪುರಾತನ ಮಣ್ಣಿನ ಪಾತ್ರೆಗಳು ಮತ್ತು ನಾಣ್ಯಗಳ ಮೇಲೆ ಇಂದಿಗೂ ದಾಳಿಂಬೆಯ ಚಿತ್ರಗಳಿವೆ.

'ಪೊಮೆಗ್ರಾನಟ್' ಎಂಬ ಹೆಸರು ಫ್ರೆಂಚ್ ಭಾಷೆಯಿಂದ ಬಂದಿದೆ. ಮಲಾಮ್ ಪುನಿಕಮ್ ಎಂದರೆ, ಧಾನ್ಯಭರಿತ ಸೇಬು, ಹೀಗೆ ದಾಳಿಂಬೆಯ ಬೀಜಗಳನ್ನು ಧಾನ್ಯಕ್ಕೆ ಹೋಲಿಸಲಾಗಿದೆ. ಕೆಲವು ದೇವಸ್ಥಾನಗಳ ದಾರು ಕೆತ್ತನೆಯಲ್ಲಿ ದಾಳಿಂಬೆಯ ಚಿತ್ರಗಳನ್ನು ಕಾಣಬಹುದು. ಪಾರ್ಸಿ ಜನರು ದಾಳಿಂಬೆಯ ಕೊಂಬೆಗಳನ್ನು ಪವಿತ್ರ ಚಾಮರಕ್ಕಾಗಿ ಬಳಸುತ್ತಾರೆ. ಅವರ ಸಮಾಜದಲ್ಲಿ ಜನಿವಾರ ಧಾರಣೆ ಸಂದರ್ಭದಲ್ಲಿ ಮಗುವಿಗೆ ಕೆಟ್ಟ ದೃಷ್ಟಿ ತಾಕದಿರಲೆಂದು ದಾಳಿಂಬೆಯ ಬೀಜಗಳನ್ನು ಪ್ರೋಕ್ಷಿಸುತ್ತಾರೆ. ಮರಣ ಸಮಯದಲ್ಲಿ ದಾಳಿಂಬೆ ರಸ 'ಚರಕ' ಮತ್ತು 'ಸುಶ್ರುತ' ಸಂಹಿತೆಗಳಲ್ಲಿ ದಾಳಿಂಬೆ ಹಣ್ಣಿನ ಔಷಧೀಯ ಗುಣಗಳ ಬಗ್ಗೆ ಉಲ್ಲೇಖವಿದೆ.

ದಾಳಿಂಬೆಯು ಪೊದೆಯಂತೆ ಬೆಳೆಯುವ ಚಿಕ್ಕಮರ, ಈ ಗಿಡದ ಹಣ್ಣು ಹಣ್ಣಿನ ತಿರುಳು, ಕಾಂಡ, ತೊಗಟೆಗಳು ಎಲ್ಲವೂ ಔಷಧಿಯುಕ್ತ.

**ಔಷಧೀಯ ಗುಣಗಳು**

* ಬಾಯಾರಿಕೆ ತಗ್ಗಿಸಲು ದಾಳಿಂಬೆಯ ರಸ ಉತ್ತಮವಾದ ಪಾನೀಯ.
* ಜ್ವರಪೀಡಿತರಿಗೆ ದಾಳಿಂಬೆ ರಸ ಮತ್ತು ಸಕ್ಕರೆ ಸೇರಿಸಿ ತಯಾರಿಸಿದ ಗ್ರೆನೆಡಿನ್ ಎಂಬ ತಂಪು ಪಾನೀಯ ನೀಡಿದರೆ ಉತ್ತಮ ಪರಿಣಾಮ.
* ಮೂಗು ಮತ್ತು ವಸಡುಗಳಲ್ಲಿ ರಕ್ತಸ್ರಾವವಾಗುತ್ತಿದ್ದರೆ ದಾಳಿಂಬೆ ಹೂಗಳ ಸೇವನೆ ಮಾಡಬೇಕು.
* ಆಮಶಂಕೆ ಮತ್ತು ರಕ್ತಭೇದಿಯಿರುವಾಗ ದಾಳಿಂಬೆಯ ತಾಜಾ ಹಣ್ಣನ್ನು ತಿನ್ನಬೇಕು.
* ಮೂತ್ರ ಕಟ್ಟಿದ್ದಲ್ಲಿ ದಾಳಿಂಬೆಯ ರಸ ಕುಡಿಯಬೇಕು.
* ಹೃದ್ರೋಗ, ಜಠರದ ತೊಂದರೆ, ಕಾಮಾಲೆ ಪೀಡಿತರಿಗೂ ದಾಳಿಂಬೆ ಸೇವನೆ ಒಳ್ಳೆಯದು.
* ಜಂತುಹುಳು ಬಾಧಿಸಿದಾಗ ಬೇರಿನ ತೊಗಟೆಯ ಕಷಾಯ ಸೇವಿಸಬೇಕು.
* ಹೊಟ್ಟೆನೋವು, ಹಲ್ಲು ನೋವಿದ್ದರೆ ದಾಳಿಂಬೆ ಹೂವಿನ ರಸದಿಂದ ಶಮನವಾಗುತ್ತದೆ.
* ಅಜೀರ್ಣವಾಗಿದ್ದರೆ ದಾಳಿಂಬೆ ರಸಕ್ಕೆ ಒಂದು ಚಮಚದಷ್ಟು ಜೀರಿಗೆಪುಡಿ ಸೇರಿಸಿ ಕುಡಿಯಬೇಕು.
* ಕೆಮ್ಮು ಇರುವಾಗ ದಾಳಿಂಬೆ ರಸಕ್ಕೆ ಜೇನುತುಪ್ಪ ಬೆರೆಸಿ ಕುಡಿಯಬೇಕು.
* ಅಲರ್ಜಿಯ ತೊಂದರೆಯಿದ್ದಲ್ಲಿ ದಾಳಿಂಬೆಯನ್ನು ಕಲ್ಲುಸಕ್ಕರೆಯೊಂದಿಗೆ ಸೇವಿಸಬೇಕು.
* ಗಂಟಲು ನೋವಿದ್ದರೆ ಈ ಹಣ್ಣಿನ ತೊಗಟೆಯ ಕಷಾಯದಿಂದ ಬಾಯಿ ಮುಕ್ಕಳಿಸಬೇಕು.
* ನರಗಳ ತೊಂದರೆಯಿದ್ದರೆ ದಾಳಿಂಬೆ ಹಣ್ಣಿನ ಸೇವನೆಯಿಂದ ಉಪಶಮನ ಲಭಿಸುತ್ತದೆ.
* ಗಾಯ ಮತ್ತು ವ್ರಣಗಳಿಗೆ ಬೇರನ್ನು ಅರೆದು ಲೇಪಿಸಿದರೆ ಉತ್ತಮ ಪರಿಣಾಮ
* ತಲೆನೋವಿರುವಾಗ ದಾಳಿಂಬೆ ಗಿಡದ ಬೇರನ್ನು ನೀರಿನಲ್ಲಿ ಅರೆದು ಹಣೆಗೆ ಲೇಪಿಸಿದರೆ ಕಡಿಮೆಯಾಗುತ್ತದೆ.
* ಮೈಮೇಲೆ ಗುಳ್ಳೆಗಳೆದಿದ್ದರೆ ದಾಳಿಂಬೆ, ಜೀರಿಗೆ, ದನಿಯಾ 24 ಗಂಟೆ ನೀರಿನಲ್ಲಿ ನೆನೆಸಿಟ್ಟು ಅನಂತರ ಬೆಲ್ಲ ಬೆರೆಸಿ ಕುಡಿದರೆ ಉಪಶಮನ ದೊರೆಯುತ್ತದೆ.

ಸುಟ್ಟ ಗಾಯಗಳಿಗೆ ದಾಳಿಂಬೆ ಎಲೆಗಳನ್ನು ಅರೆದು ಲೇಪಿಸಬೇಕು.

**ಅಡುಗೆಯಲ್ಲಿ:** ದಾಳಿಂಬೆಯಿಂದ ಸಿರಪ್, ಚಟ್ನಿ, ಕೋಸಂಬರಿ ತಯಾರಿಸಬಹುದು.

**–ಸುಬ್ರಹ್ಮಣ್ಯಶರ್ಮ**

## ನನ್ನ ಮಾತು





# ತಂತ್ರ–ಅತಂತ್ರ–ಪ್ರತಿತಂತ್ರ

ನೀವು ಏನೇ ಮಾಡಿ ರಾಜಕಾರಣವನ್ನು ಜನ ಸಾವಾನ್ಯರೊಂದಿಗೆ ವಾಡಬೇಡಿ. ಅಂತೂ ಇಂತು ಅಧಿಕಾರ ಸಿಕ್ಕಿದೆ. ಅದನ್ನು ಉಳಿಸಿಕೊಳ್ಳಲು ಉತ್ತಮ ಕೆಲಸವನ್ನು ಜನಸಾವಾನ್ಯರಿಗೆ ವಾಡಿ. ಜನರಿಂದ, ಜನರಿಗಾಗಿ, ಜನರಿಗೋಸ್ಕರ ಪ್ರಜಾಪ್ರಭುತ್ವದ ಪ್ರಕಾರ ನೀವು ಕಾರ್ಯ ಮಾಡುತ್ತಿದ್ದೀರಾ ಎಂದು ನೀವೇ ಪ್ರಶ್ನಿಸಿಕೊಳ್ಳಿ.

ಈಗ ಶತದಿನೋತ್ಸವವನ್ನು ಆಚರಿಸಿರುವ ಸಮ್ಮಿಶ್ರ ಸರ್ಕಾರ ಜನಸಾವಾನ್ಯರಿಗೆ ಎಲ್ಲಾ ವರ್ಗದವರಿಗೂ ಏನನ್ನು ನೀಡಿದೆ ಎಂಬುದನ್ನು ಪ್ರಕಟಿಸಿದ್ದಲ್ಲಿ ಎಲ್ಲರಿಗೂ ಏನು ಮಾಡಿದ್ದೀರಾ ಎಂಬುದು ತಿಳಿಯುತ್ತದೆ.

ಹವಾಮಾನ ವೈಪರೀತ್ಯದಿಂದ ಕೊಡಗು ಹಾಗೂ ಕೇರಳದಲ್ಲಿ ಉಂಟಾದ ಅನಾಹುತಕ್ಕೆ ಕಾರಣ ಯಾರು? ಹಾಗೂ ಪುನರ್ ಸ್ಥಾಪಿಸುವಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರ ಕಾರ್ಯರೂಪಕ್ಕೆ ತರುವ ಯಾವ ನಿಲುವನ್ನು ತೆಗೆದುಕೊಂಡು ಅಲ್ಲಿನ ಜನಕ್ಕೆ ಆಶ್ರಯ ಹಾಗೂ ಎಲ್ಲಾ ಸವಲತ್ತನ್ನು ನೀಡಲು ಮುಂದಿದೆಯೇ? ಈ ಸಂದರ್ಭದಲ್ಲಿ ಅಲ್ಲಿ ಜನ ಜೀವನ ಅಸ್ತವ್ಯಸ್ತಗೊಂಡಿದ್ದು, ಸಾಗರೋಪಾದಿ ಯಲ್ಲಿ ಸಹಾಯವನ್ನು ನೀಡಿದ್ದು, ಅದು ನಿಜವಾಗಲೂ ಆಶ್ರಯವಿಲ್ಲದವರಿಗೆ ತಲುಪಿದೆಯೇ? ಹಾಗೂ ಸರ್ಕಾರ ಪ್ರಕಟಿಸುವಂತಹ ಯೋಜನೆಗಳಲ್ಲಿ ಆಶ್ರಯವಿಲ್ಲದವರಿಗೇನೆ ತಲುಪುವಂತೆ ನೋಡಿಕೊಳ್ಳುವಂತಹ ಜವಾಬ್ದಾರಿ ಇದೆ. ಏಕೆಂದರೆ ನಿಮ್ಮಿಂದ ಬಂದಂತಹ ಯೋಜನೆಯ ಹಣವನ್ನು ನುಂಗುವವರು ಇದ್ದಾರೆ. ಅದನ್ನು ಹೇಗೆ ತಡೆಯಬೇಕೆಂಬು ದನ್ನು ಯೋಚಿಸಿ ಯೋಗ್ಯರಿಗೆ ಯೋಜನೆಯನ್ನು ನೀಡಿ ನಿಜ ವಾಗಲೂ ನಿರಾಶ್ರಿತರಾದವರಿಗೆ ವ್ಯವಸ್ಥೆ ಅಚ್ಚುಕಟ್ಟಾಗಿ ಆದಷ್ಟು ಬೇಗನೆ ತಲುಪಬೇಕೆಂದು ಜನರ ಅಭಿಪ್ರಾಯವಾಗಿದೆ.

ಒಂದು ಯೋಚನೆ ಜನರಲ್ಲಿ ಬಂದಿದೆ. ಅದೇನೆಂದರೆ ರಾಷ್ಟ್ರಪತಿ ಆಡಳಿತ ಸಮಯದಲ್ಲಿ ಸರ್ಕಾರ ನಡೆಯುವುದಿಲ್ಲವೇ? ಅದೇ ರೀತಿ ಸರ್ಕಾರ ರಾಜ್ಯವನ್ನು ನಡೆಸಲಿ. ಅದಕ್ಕೆ ಜನಪ್ರತಿನಿಧಿಗಳು, ಶಾಸಕರು, ಮಂತ್ರಿಗಳು ಬೇಕೇಬೇಕು. ಕೆಲಸ ಮಾಡುವವರು ತಹಸೀಲ್ದಾರ್, ಎಸಿ, ಡಿಸಿ, ಕಮಿಷನರ್, ವಿಧಾನಸೌಧದಲ್ಲಿರುವ ಸರ್ಕಾರಿ ನೌಕರರೇ ಕೆಲಸ ಮಾಡುವುದು. ನಿಮಗೇಕೆ ಸಂಬಳ, ಎಲ್ಲಾ ಸರ್ಕಾರಿ ಸವಲತ್ತುಗಳು ಎಂಬುದು ಜನಸಾಮಾನ್ಯರ ಮಾತಾಗಿದೆ.

ಸಂಪಾದಕ
**ಹೆಚ್.ವಿ. ಸುಬ್ಬರಾವ್**
ನಿವೃತ್ತ ಸಾ.ಶಿ.ಇ. ನೌಕರ


## ಮಹಿಳಾ ವಿಶೇಷ

**ಕನ್ನಡ ತಿಂಗಳ ಪತ್ರಿಕೆ**

**ಸೆಪ್ಟಂಬರ್ 1 ರಿಂದ 30–2018**

**ಸಂಪುಟ 4, ಸಂಚಿಕೆ 1,**

**ಪುಟ 16 ಬೆಲೆ ರೂ.: 10**

**MAHILA VISHESHA**

**KANNADA MONTHLY**

**September 1 to 30 -2018**

Vol : 4 **Issue : 1 Pages : 16**

**Price : Rs.10/-**

**ಮುಖಪುಟ :**

**ಶ್ರೀ ಸ್ವರ್ಣಗೌರಿ ದೇವಸ್ಥಾನ,**

**ಮಾಡಾಳು, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ**

**ಗೌರವ ಸಂಪಾದಕರು :**

**ಶ್ರೀಮತಿ ಸತ್ಯಭಾಮಾ ದಾಸ್**

**ಶ್ರೀಮತಿ ಗೀತಾ ರಾವ್**

**ಸಂಪಾದಕರು :**

**ಹೆಚ್.ವಿ.ವೆಂಕಟಸುಬ್ಬರಾವ್**

**ಮೊಬೈಲ್ 9243584444**

**ಉಪಸಂಪಾದಕರು :**

**ಎಸ್.ವೆಂಟಕರವಣಪ್ಪ**

**ಎಂ.ಆರ್. ಜಯಪ್ರಕಾಶ ನಾರಾಯಣ**

**ಭಾಸ್ಕರ್ ಹೆಚ್.ವಿ.**

**ಮೂರ್ತಿ ಜಿ.ಎನ್.**

**ಕಚೇರಿ ವಿಳಾಸ :**

**ಮಹಿಳಾ ವಿಶೇಷ**

**ನಂ. 136, ಶ್ರೀ ನೀಲಕಂಠಸ್ವಾಮಿ ಮಠ,**

**ಗನ್‌ಹೌಸ್ ಎದುರು, ಖಿಲ್ಲೆ ಮೊಹಲ್ಲಾ,**

**ಮೈಸೂರು – 570004**

**E-mail:**

**mahilavishesha15@gamil.com**

**Web: www.mahilavishesha.in**

**Whatsapp No : 8880334444**

# ಸ್ವರ್ಣಗೌರಿ ವ್ರತ

ಹೃದಯದಲ್ಲಿ ಕೂತಿರುವ ಭಗವಂತನನ್ನು ಹರಿಶಿನ ಅಥವಾ ಮೃತ್ತಿಕೆಯಲ್ಲಿ ಆವಾಹಿಸಿ ಪೂಜಿಸಬೇಸಬೇಕು.

ಗೌರಿ ಹಬ್ಬವು ಆಬಾಲ ವೃದ್ಧರಾಗಿ ಉತ್ಸಾಹದಿಂದ ಎದುರುನೋಡಿ ಒಟ್ಟಾಗಿ ಆಚರಿಸುವ ಹಬ್ಬ. ವಾತ್ಸಲ್ಯಮಯಿ, ಶಾಂತಮೂರ್ತಿ, ಮಂಗಳಕರಳೂ ಆದ ಗೌರಿ ಮಾತೆ ಆಸ್ತಿಕರೆಲ್ಲರ ಹೃದಯಕ್ಕೂ ಹತ್ತಿರವಾದ ದೇವತೆ, ಪುರಾಣಗಳಲ್ಲಿ ಹೇಳಿರುವಂತೆ, ಪಾರ್ವತಿಯು ಶುಂಭ, ನಿಶುಂಭರನ್ನು ವಧಿಸಿದ ನಂತರ ಶ್ಯಾಮಲ ವರ್ಣವನ್ನು ಪಡೆದು ಕಾಳಿಯಾಗಿ, ಮತ್ತೆ ಹಿಮವಂತನ ಮಗಳಾಗಿ ತಪಸ್ಸನ್ನಾಚರಿಸಿ ಗೌರವರ್ಣವನ್ನು ಪಡೆದು ಗೌರಿಯಾದ ದೇವೀ ಭಾಗವತದಲ್ಲಿಯೂ ವಿಷ್ಣುಸೋದರಿಯಾದ ಪಾರ್ವತಿಯು ಗೌರಿಯಾದ ಉಲ್ಲೇಖವಿದೆ. ಭಾದ್ರಪದ ಮಾಸದಲ್ಲಿ ಗೌರಿಯು ತವರಿಗೆ ಬರುವಾಗ ಗಣಪನನ್ನು ಕರೆತರುತ್ತಾಳೆ. ಈ ತಾಯಿ ಮಗನ ಆಗಮನ ಭೂಲೋಕದಲ್ಲಿ ಅತಿ ದೊಡ್ಡ ಹಾಗೂ ಸಂಭ್ರಮದ ಸಾರ್ವಜನಿಕ ಹಬ್ಬವನ್ನು ಆಚರಿಸಲಾಗುತ್ತದೆ. ವಿಶೇಷವಾಗಿ ಹೆಂಗಳೆಯರಿಂದ ಆಚರಿಸಲ್ಪಡುವ ಈ ಹಬ್ಬವು ವ್ರತದೋಪಾದಿಯಲ್ಲಿ ಪ್ರತಿವರ್ಷ ಭಾದ್ರಪದ ಶುದ್ಧ ತದಿಗೆಯಂದು ಆಚರಿಸಲ್ಪಡುತ್ತದೆ. ಶ್ರೀಗೌರಿ ದೇವಿಯನ್ನು ಮನೆಯ ಹೆಣ್ಣುಮಗಳೆಂಬಂತೆ, ಸಂಭ್ರಮ, ಸಡಗರದಿಂದ ಸ್ವಾಗತಿಸಿ, ಅಲಂಕರಿಸಿ ಶಾಸ್ತ್ರೋಕ್ತವಾಗಿ ಪೂಜಿಸಿ, ಮೊರದಬಾಗಿನವಿತ್ತು. ಮಡಿಲಕ್ಕಿ ತುಂಬಿ ದೇವಿಯನ್ನು ಮೂರು, ಐದು ಅಥವಾ ಏಳುದಿನ ಪೂಜಿಸಿ ಅವಳ ಪತಿಯಮನೆಗೆ ಕಳುಹಿಸಿಕೊಡುವುದು ಸಂಪ್ರದಾಯ. ಈ ಜನಾಂಗದ ಕೆಲವು ಸಂಪ್ರದಾಯಿಕ ಮನೆಗಳಲ್ಲಿ ಇಂದಿಗೂ ಅನಂತಪದ್ಮನಾಥ ವ್ರತವನ್ನು ಮಾಡಿ, ನಂತರ ಆ ದಿನವೇ ಗೌರಿಯನ್ನು ಪತಿ ಗೃಹಕ್ಕೆ ಕಳುಹಿಸಿಕೊಡುವುದು ಸಂಪ್ರದಾಯ ಬದ್ಧವಾಗಿ ಮುಂದುವರೆಯುತ್ತಾ ಬಂದಿದೆ. ಈ ಕಾರಣದಿಂದಲೇ ಈ ದಿನದಂದು ಹೆಣ್ಣು ಮಕ್ಕಳನ್ನು ತವರಿಗೆ ಕರೆತಂದು ವಿಶೇಷ ಊಟ ಉಪಚಾರವನ್ನು ಮಾಡುವುದೂ ಸಂಪ್ರದಾಯವಾಗಿ ಬಂದಿದೆ. ಈ ದಿನದಂದು ಗೌರೀದೇವಿಯನ್ನು ಷೋಡಶೋಪಚಾರದಿಂದ ಪೂಜಿಸಿ, ದೇವಿಗೆ ಪ್ರಿಯವಾದ ತಿನಿಸುಗಳನ್ನು ಶ್ರದ್ಧಾಭಕ್ತಿಯಿಂದ ಮಾಡಿ, ನಿವೇದಿಸಿ ನಂತರ ಪ್ರಸಾದವಾಗಿ ಎಲ್ಲರೂ ಸ್ವೀಕರಿಸುತ್ತಾರೆ.



ಒಬ್ಬಟ್ಟು, ಕೋಸಂಬರಿ, ತಂಬಿಟ್ಟು ದೇವಿಗೆ ವಿಶೇಷ ತಿನಿಸುಗಳು. ಮೂಲವಾಗಿ ಸುವಾಸಿನಿಯರು ತಮ್ಮ ಮಾಂಗಲ್ಯ ಭಾಗ್ಯಕ್ಕಾಗಿ ಈ ವ್ರತವನ್ನು ಮಾಡುವುದು ಸಂಪ್ರದಾಯವಾಗಿ ಬೆಳೆದು ಬಂದಿದೆ. ಮದುವೆಯಾಗದ ಕನ್ಯೆಯರು ಈ ಪೂಜೆಯನ್ನು ಮಾಡುವುದರಿಂದ ಶೀಘ್ರದಲ್ಲಿ ಅವರಿಗೆ ಕಂಕಣಭಾಗ್ಯ ಕೂಡಿ ಬರುತ್ತದೆ ಎಂಬ ನಂಬಿಕೆ ಈಗಲೂ ದೃಢವಾಗಿದೆ. ಕರ್ನಾಟಕ ಪ್ರಾಂತ್ಯದಲ್ಲಿ ನೆಲೆಸಿರುವ ಐಯ್ಯರ್ ಜನಾಂಗದವರು ಈ ವ್ರತವನ್ನು ಮಾಡುತ್ತಾರಲ್ಲದೆ, ಧಾರೆಗೆ ಮುಂಚೆ ಗೌರೀಪುಜೆಯನ್ನು ಮಾಡಿಸುತ್ತಾರೆ. ಆದರೆ ತಮಿಳುನಾಡು ಕೇರಳದಲ್ಲಿ ನೆಲೆಸಿರುವ ವಡಮಾ ಐಯ್ಯರ್‌ಗಳಲ್ಲಿ ಗೌರೀವ್ರತವೂ ಹಾಗೂ ಮದುವೆಯಲ್ಲಿ ಗೌರೀ ಪೂಜೆಮಾಡುವ ಪದ್ಧತಿಯು ಕಾಣಬರುವುದಿಲ್ಲ. ಗೌರಿಯು ನೀರಿಗೆ ದೇವತೆಯಾದ ಗಂಗೆಯೊಡನೆ ಯಾವಾಗಲೂ ಇರುತ್ತಾಳಾದ್ದರಿಂದ ರೈತಬಾಂಧವರಿಗೂ ಈ ದೇವಿಯು ಅತ್ಯಂತ ಶ್ರೇಷ್ಠಳು, ಅವರು ಬೆಳೆಯುವ ಬೆಳೆ, ಬೀಜಗಳು ಉತ್ಕೃಷ್ಟವಾಗಿರುಲು ಗೌರಮ್ಮನ ಕೃಪೆ ಅಗತ್ಯವೆಂದೇ ಅವರ ವಂಬಿಕೆ. ತಮ್ಮ ಭೂಮಿಯಲ್ಲಿ ಸಮೃದ್ಧವಾದ ಫಸಲನ್ನು ನೀಡುವಂತೆ ಪ್ರಾರ್ಥಿಸುತ್ತಾ, ರೈತಾಪಿ ಜನರು ಈ ದೇವಿಯನ್ನು ಬೇಡುತ್ತಾರೆ. ವ್ರತ ಸಮಾಪ್ತಿಯಾದ ಮೇಲೆ ಗೌರೀ ದೇವಿಯ ಕಲಶವನ್ನು ಕದಲಿಸಿ ಅವಳ ಮಗನಾದ ಗಣಪತಿಯೊಂದಿಗೆ ಅವಳ ಪತಿಗೃಹಕ್ಕೆ ಮರಳಿ ಕಳುಹಿಸಿಕೊಡುವ ಸಂಪ್ರದಾಯ ಬಹಳ ಭಾವನಾತ್ಮಕದಿಂದ ಕೂಡಿರುತ್ತದೆ. ಪ್ರಕೃತಿಯಲ್ಲಿ ಕಾಣವ ಶಕ್ತಿಉ ಪ್ರತೀಕರವಾದ ಈ ದೇವಿಯನ್ನು ನದಿಗಳಲ್ಲಿ, ಕೆರೆಬಾನಿಗಳಲ್ಲಿ ಕ್ರಮಬದ್ಧವಾಗಿ ವಿಸರ್ಜಿಸುವುದೂ ಸಂಪ್ರದಾಯಬದ್ಧಾಗಿರುತ್ತದೆ. ಈ ದಿನದಂದು ಮೊಸರನ್ನ, ಹುಳಿಯವಲಕ್ಕಿ, ಹಣ್ಣುಗಳು, ಎಳ್ಳುಂಡೆಗಳನ್ನು ನೈವೇದ್ಯ ಮಾಡಿ, ಅನಂತರ ದೇವಿಯನ್ನು , ವಿಸರ್ಜಿಸಿದ ಸ್ಥಳದಲ್ಲೇ ಈ ಪ್ರಸಾದವನ್ನು ಎಲ್ಲರೂ ತಿಂದು ತೃಪ್ತರಾಗುತ್ತಾರೆ. ಈ ದೇವಿಯ ಪ್ರತಿಮೆಯನ್ನು ಸಂಪ್ರದಾಯಕ್ಕನುಗುಣವಾಗಿ ನಾನಾರೀತಿಯಲ್ಲಿ

ಮಾಡುತ್ತಾರೆ. ಚಿನ್ನ, ಬೆಳ್ಳಿ, ಅಥವಾ ಪಂಚಲೋಹದಲ್ಲಿ ತಯಾರಿಸಿದ ವಿಗ್ರಹವನ್ನು ಪೂಜಿಸುವ ಸಂಪ್ರದಾಯವೂ ಇದೆ. ಆದರೆ ಕಾಲಕ್ಕನುಗುಣವಾಗಿ ಇತ್ತೀಚೆಗೆ ಮಣ್ಣಿನ ವಿಗ್ರಹಗಳನ್ನು ಕೊಂಡು ತಂದು ಪೂಜಿಸುವ ಪದ್ಧತಿಯು ಬಂದಿದೆ. ವ್ರತದ ಸಂದರ್ಭದಲ್ಲಿಟ್ಟ ವಿಗ್ರಹವನ್ನು ಪುರೋಹಿತರಿಗೆ ಕೊಡುವುದೂ ಸಂಪ್ರದಾಯ, ಕಾಲಾನಂತರದಲ್ಲಿ ಲೋಹದ ವಿಗ್ರಹಗಳನ್ನು ಇಟ್ಟು ಪೂಜಿಸಿದ ನಂತರ, ಅವನ್ನು ತಾವೇ ಇಟ್ಟುಕೊಂಡು ಕೇವಲ ಉಪಾಯನದಾನವನ್ನು ಪುರೋಹಿತರಿಗೆ ಕೊಡುವ ಪದ್ಧತಿ ಬಂದಿತು. ಈಗ ಮೃಣ್ ಮಯಿದೇವಿಯನ್ನು ಪೂಜಿಸಿ ಗಣತಿಯ ವಿಗ್ರಹದೊಂದಿಗೆ ನೀರಿನಲ್ಲಿ ವಿಸರ್ಜಿಸುವ ಪದ್ಧತಿ ಕೆಲವಡೆ ಇದೆ. ಗಣಪತಿಯ ವಿಸರ್ಜನೆಯಂತೆ ಕಡ್ಡಾಯವಾಗಿ ನೀರಿನಲ್ಲಿ ದೇವಿಯ ವಿಗ್ರಹಗಳನ್ನು ವಿಸರ್ಜಿಸುವುದಿಲ್ಲ. ಅದೇ ಪ್ರತಿಮೆಯನ್ನು ನೀರಿನಲ್ಲಿ ದೇವಿಯ ವಿಗ್ರಹಗಳನ್ನು ನಿಸರ್ಜಿಸುವುದಿಲ್ಲ. ಅದೇ ಪ್ರತಿಮೆಯನ್ನು ಮರುವರ್ಷವೂ ವ್ರತದ ಸಂದರ್ಭದಲ್ಲಿ ಅಲಂಕರಿಸಿ ಇಡುವುದೂ ಒಂದು ಸಂಪ್ರದಾಯ ಆದರೆ ಅತ್ಯಂತ ಕಟ್ಟುನಿಟ್ಟಾಗಿ ಶಾಸ್ತ್ರೋಕ್ತವಾಗಿ ವ್ರತವನ್ನು ಆಚರಿಸುವವರು ಒಂದು ಕರೀಬಟ್ಟೆಯಲ್ಲಿ ಮರಳನ್ನು ಕಟ್ಟಿ, ಬಿಳಿ ಬಟ್ಟೆಯೊಂದರಲ್ಲಿ ಅರಿಶಿನವನ್ನು ಕಟ್ಟಿ ಅದನ್ನು ಸ್ಥಾಪಿಸಿ ಪೂಜಿಸುವುದು ವಾಡಿಕೆ. ಒಂದು ಮನೆಯಲ್ಲಿ ಅನೇಕ ಸೊಸೆಯರು ಇದ್ದಲ್ಲಿ, ಅತ್ತೆಯಕಾಲಾನಂತರ ಹಿರಿಯಸೊಸೆ ಮಾತ್ರ ಕಲಶವನ್ನು ಮನೆಯ ಸಂಪ್ರದಾಯದಂತೆ ಸ್ಥಾಪಿಸಿ ಪೂಜಿಸುವುದು ಸಂಪ್ರದಾಯ, ಇತರ ಸೊಸೆಯರು ಅದೇ ಕಲಶಕ್ಕೆ ಪೂಜೆ ಮಾಡಬೇಕು ವಿನಾ, ತಾವೇ ಬೇರೆ ಕಲಶವನ್ನು ಇಡುವಹಾಗಿಲ್ಲ, ಕಲಶಸ್ಥಾಪನೆಯಾದ ನಂತರ ದೇವಿಗೆ ವಿಧವಿಧ ಆಭರಣಗಳನ್ನು ತೊಡಿಸಿ, ವಸ್ತ್ರಲಂಕಾರ ಮಾಡುವರು, ಅಕ್ಕಿ ಅಥವಾ ಭತ್ತದ ಮೇಲೆ ಕಲಶಸ್ಥಾಪನೆ ಮಾಡಬೇಕು.

**ಇತರ ವಿಧಾನಗಳು:–**

**ಹರಿಶಿನದ ಗೌರಿ:–** ಹರಿಶಿನವನ್ನು ಸ್ವಲ್ಪ ನೀರಿನಲ್ಲಿ ಗಟ್ಟಿಯಾಗಿ ಕಲೆಸಿ ಉಂಡೆಯನ್ನಾಗಿ ಮಾಡಿ, ಅದಕ್ಕೆ ತ್ರಿಕೋಣಾಕಾರ ಕೊಟ್ಟು ಕುಂಕುಮ ಹಚ್ಚಿ ಪ್ರತಿಷ್ಟೆಮಾಡುವುದ ಒಂದು ಸಂಪ್ರದಾಯ.

**ಮರಳಿನ ಗೌರಿ–** ಹೊಸದಾದ ಕಪ್ಪು ಬಣ್ಣದ ಒಂದು ಚೂರು ಹತ್ತಿಬಟ್ಟೆಯಲ್ಲಿ ಮರಳನ್ನು ಹಾಕಿ ಅದನ್ನು ಹಳದೀ ದಾರದಿಂದ ಕಟ್ಟಿ ಅದನ್ನು ಅಕ್ಕಿತಂಬಿದ ಒಂದು ತಟ್ಟೆಯಲ್ಲಿಟ್ಟು ಪೂಜಿಸುವುದು ಒಂದು ಸಂಪ್ರದಾಯ.

**ಬೆಳ್ಳಿ ಅಥವಾ ಪಂಚಲೋಹದ ಗೌರಿ :–** ದಿನನಿತ್ಯ ಪೂಜಿಸುವ ಈ ಲೋಹದ ಗೌರಮ್ಮನನ್ನ ಧ್ಯಾನ್ಯ ತುಂಬಿದ ತಟ್ಟೆಲ್ಲಿಟ್ಟು ಪೂಜಿಸುವುದೂ ಒಂದು ಸಂಪ್ರದಾಯ,

**ಮಣ್ಣಿನ ಗೌರಿ:–** ಅಂಗಡಿಗಳಲ್ಲಿ ಮಾರುವ ಬಣ್ಣಹಾಕಿದ ಅಥವಾ ಹಾಕದ, ಅಲಂಕಾರ ಮಾಡಿದ ಗೌರಮ್ಮನನ್ನು ತಂದು ಪೂಜಿಸುವುದೂ ರೂಢಿಯಲ್ಲಿದೆ. ದೇವಿಯನ್ನು ವಿಸರ್ಜಿಸುವ ದಿನ ಮೊದಲು ಗಣಪತಿಯನ್ನು ಕದಲಿಸಿ, ಮಂಟಪದ ಕೆಳಗೆ ಒಂದು ತಟ್ಟೆಯಲ್ಲಿ ಸುಮಂಗಲಿಯರು ಪುನ: ಪೂಜೆಮಾಡಿ ದೇವಿಯ ಮಡಿಲಿಗೆ ಸೋಗಲಕ್ಕಿ ತಂಬಬೇಕು. ನಂತರ ಗಣಪತಿ, ಗೌರೀದೇವಿಯಜನ್ನು ನಿರ್ಮಾಲ್ಯದ ಸಮೇತ ಬುಟ್ಟಿಯಲ್ಲಿಟ್ಟುಕೊಂಡು ಹತ್ತಿರದ ನದಿ, ಕೆರೆಯ ಸಮಿಪಕ್ಕೆ ತಂದು ಗಂಗೆ ಪೂಜೆಮಾಡಿ ನಂತರ ಎಲ್ಲವನ್ನೂ ನೀರಿನಲ್ಲಿ ತೇಲಿಬಿಡುವುದು ಸಂಪ್ರದಾಯ, ಎಲ್ಲವೂ ಅದನಂತರ ದೇವಿಗೆ ಅರ್ಪಿಸಿದ್ದ ಗೆಜ್ಜೆವಸ್ತ್ರದ ಒಂದು ತುಂಡನ್ನು ಸುಮಂಗಲಿಯರು ತಮ್ಮ ಮಾಂಗಲ್ಯ ಸರಕ್ಕೆ ಕಟ್ಟಿಕೊಳ್ಳಬೇಕು, ಮನೆಯಲ್ಲಿ ಮಡಿಲಕ್ಕಿ ತುಂಬುವಾಗಲೇ, ತಮ್ಮ ಬಲಹಸ್ತದಲ್ಲಿ ಪೂಜೆ ಮಾಡಿ ಕಟ್ಟಿಕೊಂಡಿದ್ದ ಗೌರೀದಾರವನ್ನು ಬಿಚ್ಚಿ ನಿರ್ಮಾಲ್ಯದ ಜೊತೆಯಲ್ಲಿ ಹಾಕುವುದು ವಾಡಿಕೆ. ಇಲ್ಲವಾದಲ್ಲಿ ಮನೆಯ ಮುಂದಿನ ಯಾನುದಾದರೂ ಗಿಡದಪಾತಿಯಲ್ಲೂ ಹಾಕಬಹುದು. ಈ ದಾರದ ಮಹಿಮೆ ಎಷ್ಟೆಂದರೆ,ಆ ದಾರವು ಸೋಕಿದ ಒಣಗಿದ ಗಿಡವು ಪುನ: ಚಿಗುರುತ್ತದೆ ಎಂದು ಹೇಳಲಾಗುತ್ತದೆ.

ಕೆಲವು ಮನೆಗಳಲ್ಲಿ ಗೌರಮ್ಮನನ್ನು ಪ್ರತಿಷ್ಠಾಪನೆ ಮಾಡಿದ ಮನೆಗಳಿಗೆ ಸಕಲಪೂಜಾಸಾಮಗ್ರಿಗಳನ್ನು ಕೊಂಡುಯ್ದು ಪೂಜಿಸಿ ಜೊತೆಗೆ ಆ ಮನೆಯಲ್ಲಿ ದೇವಿಯನ್ನು ವಿಸರ್ಜಿಸುವ ದಿನದವರಿಗೂ ಪ್ರತಿನಿತ್ಯ ಹೋಗಿ ಉತ್ತರ ಪೂಜೆ ಮಾಡುವ ಪದ್ಧತಿ ಇದೆ. ಈ ವ್ರತದ ಸಂಧರ್ಭದಲ್ಲಿ ಸುಮಂಗಲಿಯರೆಲ್ಲರೂ ಪರಸ್ಪರ ಮಂಗಳ ದ್ರವ್ಯಗಳನ್ನೂ, ಮೊರದ ಬಾಗಿನಗಳನ್ನೂ ನೈವೇದ್ಯದ ತಿನಿಸುಗಳನ್ನೂ ಕೊಟ್ಟು ತೆಗೆದುಕೊಳ್ಳುವ ಪದ್ಧತಿ ಅತ್ಯಂತ ಆಕರ್ಷಣೀಯವಾಗಿರುತ್ತದೆ. ಕಲಶ ಇಟ್ಟು ಮನೆಯವರೂ ಕೂಡ ಪ್ರತಿದಿನವೂ ಗೌರಮ್ಮನನ್ನು ಬಿಡುವವರೆಗೂ ಬಗಬಗೆಯ ನೈವೇದ್ಯಗಳನ್ನು ದೇವಿಗೆ ಅರ್ಪಿಸಿ, ಪದ್ಧತಿಯೂ ಇತ್ತು. ಆದರೆ ವರ್ಷ ವರ್ಷ ಕಳೆದಂತೆ, ಈ ಎಲ್ಲಾ ಪರಿಪಾಟಗಳು ಹೆಚ್ಚಾಗಿ ನಗರ ಪ್ರದೇಶಗಳಲ್ಲಿ ಕಾಣಹರುವುದು ಅಪರೂಪವಾಗುತ್ತಿದೆ.

**ಮೊರದ ಬಾಗೀನ :–** ಇಂದು ಜೊತೆ ಮೊರವನ್ನು ತೆಗೆದುಕೊಂಡು, ಇಂದು ಮೊರದಲ್ಲಿ ಬಾಳೆ ಎಲೆಯನ್ನು ಹಾಕಿ, ಅದರಲ್ಲಿ ಅಕ್ಕಿ, ತೊಗರೀ ಬೇಳೆ, ಉದ್ದಿನಬೇಳೆ, ಹಸರುಬೇಳೆ, ಕಡಲೇಬೇಳೆ, ಗೋಧಿ ಅಥವಾ ರವೆ, ಬೆಲ್ಲದ ಅಚ್ಚು, ರವಿಕೆ ಖಣ, ಎಲೆ, ಅಡಿಕೆ, ತಿಂಗಿನಕಾಯಿ, ಹಣ್ಣುಗಳು, ಗಾಜಿನಬಳೆ

(4 ಅಥವಾ 6) ಗೌರೀ ಬಳೆ (1 ಜೊತೆ), ಕನ್ನಡಿ, ಬಾಚಣಿಗೆ, ಹರಿಶಿನ, ಕುಂಕುಮ, ಚಂದ್ರವನ್ನು ಹಾಕಿದ ಭರಣಿಗಳು, ಹೂವು, ದಕ್ಷಿಣೆ, ಕೊಬ್ಬರಿ ಬಟ್ಟಲು, ಕಾಡಿಗೆ– ಎಲ್ಲವನ್ನೂ ಅಣಿಯಾಗಿ ಜೋಡಿಸಿ ಇನ್ನೊಂದು ಮೊರದಿಂದ ಅದನ್ನು ಮುಚ್ಚಿಡಬೇಕು, ಈ ಮೊರದ ಜೊತೆಯನ್ನು ಅಮಾವಾಸ್ಯೆ, ಮಂಗಳವಾರ, ಶುಕ್ರವಾರ ದಿನಗಳನ್ನು ಬಿಟ್ಟು ಒಳ್ಳೆಯ ಕಾಲದಲ್ಲಿ ಚೆನ್ನಾಗಿ ತೊಳೆದು ಒಣಗಿಸಿ ನಂತರ ಎರಡೂ ಮೊರಕೂ ಹಿರಿಸಿನ, ಕುಂಕುಮವನ್ನು ಲೇಪಿಸಬೇಕು. ಈ ಮೊರದ ಮೇಲ್ಭಾಗಕ್ಕೆ ಹರಿಸಿನದ ಕೊಂಬನ್ನು ಹಳದೀ ದಾರದಲ್ಲಿ ಕಟ್ಟುವ ಪದ್ಧತಿಯೂ ಊಂಟು, ಹೀಗೆ ಅಣಿಮಾಡಿದ ಮೊರದ ಜೊತೆಯನ್ನು ಮಂತ್ರೋಕ್ತವಾಗಿ ಮೊದಲು ದೇವಿಗೆ ಸಮರ್ಪಿಸಿ ಸನತರ ಸುಮಂಗಲಿಯರಿಗೆ ನೀಡಬೇಕು.

ಒಂದೇ ಗೋತ್ರಕ್ಕೆ ಸೇರಿದ ಅತ್ತೆ, ಸೊಸೆ ಸಂಬಂಧದವರು ಈ ಮೊರದ ಬಾಗಿನವನ್ನು ಒಬ್ಬರಿಗೊಬ್ಬರು ಕೊಡಬಾರದೆಂಬ ನಿಯಮವಿದೆ. ತಾಯಿಗೆ ಬಾಗಿನ ಕೊಡುವುದು ಅತ್ಯಂತ ಶ್ರೇಷ್ಠ. ಈ ಮೊರದ ಜೊತೆಯನ್ನು ಸುಮಂಗಲಿಯರು ಪರಸ್ಪರ ಕಪಟ್ಟ ತೆಗೆದುಕೊಳ್ಳುವಾಗ ಒಂದು ಕ್ರಮವನ್ನು ಅನುಸರಿಸುತ್ತಾರೆ. ದಕ್ಷಿಣಾಭಿಮುಖವಾಗಿ ಕುಳಿತು ಬಾಗಿನವನ್ನು ಸ್ವೀಕರಿಸುವುದಾಗಲೀ, ಅಥವಾ ಆ ದಿಕಿನಲ್ಲಿ ಸುಮಂಗಲಿಯನ್ನು ಕುಳ್ಳಿರಿಸಿ ಮೊರವನ್ನು ಕೊಡುವುದಾಗಲೀ ಶ್ರೇಯಸ್ಕರವಲ್ಲ. ಮೊರದ ಬಾಗಿನವನ್ನು ಕೊಟ್ಟು ತೆಗೆದುಕೊಳ್ಳುವಾಗ ತಮ್ಮ ಸೀರೆಯಸೆರಗಿನಲ್ಲಿ ಮೊರವನ್ನು ಹಿಡಿದು "ಮುತ್ತೈದೆ ಸಾವಿತ್ರಿಯಾಗಿ ಚಿರಕಾಲ ಬಾಳೋಣ' ಎಂದು ಹೆಳುತ್ತಾ ಮೂರು ಬಾರಿ ಉತ್ತರ ದಕ್ಷಿಣಾಭಿಮುಖ ವಾಗಿಯು ಮೂರು ಬಾರಿ ಪೂರ್ವಪಶ್ಚಿಮಾಭಿ ಮುಖ ವಾಗಿಯೂ ಮೊರವನ್ನು ಇಬ್ಬರೂ ಸುಮಂಗಲಿಯರು ಆಡಿಸುತ್ತಾ ಕೊಟ್ಟು ತೆಗೆದುಕೊಳ್ಳಬೇಕು. ಮೊರಕೊಡುವವರು ಮೇಲಿನ ಮುಚ್ಚಳವನ್ನು ತೆಗೆದು, ಇಂಗಿಟ್ಟಿರುವ ದ್ರವ್ಯಗಳನ್ನು ಆಕೆಗೆ ತೋರಿಸಿ ಪನ: ಮೊರವನ್ನು ಮುಚ್ಚಿ ಕೆಳಗಿಟ್ಟು, ಆ ಸುಮಂಗಲಿಗೆ ನಮಸ್ಕರಿಸುವುದು ಪದ್ದತಿ, ಈ ಸಂದರ್ಭದಲ್ಲಿ ಹಿಂದಿರುವ ಉದ್ದೇಶ– ಸುಮಂಗಲಿಯರಿಯ್ಯರೂ ಗೌರೀದೇವಿಯ ಸ್ವರೂಪವಾದ್ದರಿಂದ, ವಯಸ್ಸಿನ ಅಂತರ ಇಲ್ಲಿ ನಗಣ್ಯ.

ಆದರೆ ಹಿರಿಯ ಸುಮಂಗಲಿ ಯರಿಗೆ ಆದ್ಯತೆ ಹೆಚ್ಚು.ಉಡುಕಿಕೊಂಡು ಗೌರೀದೇವಿಯ ಸ್ವರೂಪವಾದ್ದರಿಂದ, ವಯಸ್ಸಿನ ಅಂತರ ಇಲ್ಲಿ ನಗಣ್ಯ. ಆದರೆ ಹಿರಿಯ ಸುಮಂಗಲೀಯರಿಗೆ ಆದ್ಯತೆ ಹೆಚ್ಚು. ಹುಡುಕಿಕೊಂಡು ಹೋಗಿ ಅಂತಹ ಹಿರಿಯ ಮುತ್ತೈದೆಯರಿಗೆ ಮೊರದವಾಗಿನ ಕೊಡುವುದು ಅತಿಶ್ರೇಯಸ್ಕರವೆಂಬುದು ಹಿಂದೂ ನಾರಿಯರ ಭಾವನೆ. ಹೀಗೆ ಪ್ರತಿಯೊಂದು ಚಟುವಟಿಕೆಯಲ್ಲೂ ಹೆಜ್ಜೆಹೆಜ್ಜೆಗೂ ಭಾವನಾತ್ಮಕ ಚಟುವಟಿಕೆಗಳು ಎದ್ದುಕಾಣುವುದು ಈ ಹಬ್ಬದ ವೈಶಿಷ್ಟ್ಯ.

ಹೆಣ್ಣುಮಗಳು ಈ ವ್ರತವನ್ನು ಸಾಧ್ಯವಾದಷ್ಟೂ ತವರಿನಲ್ಲೇ ಆಚರಿಸುವುದೂ ಇನ್ನೊಂದು ವೈಸಿಷ್ಟ್ಯ ಈ ವ್ರತದ ಸಂದರ್ಭದಲ್ಲಿ ತಾಳೆಹೂವು ಹಗೂ ಬಿಲಿ ಕಣಿಗಲೆ ಹೂವುಗಳನ್ನು ತಪ್ಪದೆ ತಂದು ದೇವಿಗೆ ಸಮರ್ಪಿಸುವುದು ವಾಡಿಕೆ. ಬೆಳೀಕಣಿಗಲೆಹೂವಿನಿಂದ ಪೂಜಿಸಿದರೆ ಒಳ್ಳೆಯಗಂಡ, ಮಾಂಗಲ್ಯಭಾಗ್ಯ ವೃದ್ಧಿ ಎಂದು ನಂಬಿಕೆ.

ಗೌರಮ್ಮನನ್ನು ಸ್ವಾಗತಿಸುವ ಜನಪದ ಹಾಡುಗಳು, ನೃತ್ಯಗಳು ಇತ್ಯಾದಿ ರಚನೆಗಳನ್ನು ಸಾಮಾನ್ಯ ಜನರೇ ರಚಿಸಿ ಹಾಡಿ ಕುಣಿದಾಡುವುದು ಸಾಮಾನ್ಯ. ಕೋಲಾಟದ ಹಾಡುಗಳು, ಲಾವಣಿಗಳು, ಒಗಟುಗಳು,ಗೀತೆಗಳು, ನಿಂದಾಸ್ತುತಿಗಳು, ಹಾಸ್ಯ ಪೂರ್ಣವಾದ ಗೀತೆಗಳು ಇತ್ಯಾದಿ ಎಲ್ಲಾ ಪ್ರಕಾರಗಳಲ್ಲೂ ಗಣಪತಿ, ಗೌರಿಗೆ ಹೆಚ್ಚು ಪ್ರಾಧಾನ್ಯ ಎಂಬುದು ಎದ್ದು ಕಾಣುತ್ತದೆ.

ಗೌರೀಪೂಜೆ, ಅರತಿಹಾಡು, ಷೋಡಸೋಪ ಚಾರಗಳಿಂದ ದೇವಿಯನ್ನು ಉಪಚರಿಸುವ ಹಾಡು, ಉದಯರಾಗ, ಜೋಗುಳ, ಲಾಲಿ, ಸೋಧವಹಾಡು ಗಳು ಮುಂತಾದ ನಾನಾವಿಧ ಪ್ರಕಾರಗಳಲ್ಲಿ ದೇನಿಯನ್ನು ಹಾಡಿಸುಖಿಸುವುದರಲ್ಲಿ ನಮ್ಮ ಜನಾಂಗದವರೂ ಪ್ರಸಿದ್ಧರು. ಶುದ್ಧ ಭಕ್ತಿ ಭಾವವನ್ನು ಸಾರುವ, ಸರಳ ಸಂಗೀತ ಲೇಪನವುಳ್ಳ ಗೀತೆಗಳ ಜೊತೆಗೆ ಶಾಸ್ತ್ರೀಯ, ಘನವಾದ ಕೃತಿಗಳನ್ನೂ ದೇವಿಯ ಸಮ್ಮುಖದಲಿ ಹಾಡಿ ಸಂಭ್ರಮಿಸುವ ಹಬ್ಬ ಈ ಗೌರಿಹಬ್ಬ ಮುತ್ತುಸ್ವಾಮಿದೀಕ್ಷಿತರು ಗೌರಿ ರಾಗದಲ್ಲಿ "ಗೌರಿ ಗಿರಿರಾಜಕುಮಾರಿ ಗಾನವನ್ನು ಮಯೂರಿ" ಎಂಬ ಕೃತಿಯಲ್ಲಿ ಶಾಕ್ತ, ತಂತ್ರದರ್ಶವವನ್ನೇ ಮಂಡಿಸಿದ್ದಾರೆ. ಇದರಲ್ಲಿ ಶ್ರೀಚಕ್ರದ ಮಧ್ಯೆ ಬಿಂದುವಿನಲ್ಲಿ ಗೌರಿಯನ್ನು ಲಲಿತಾ ತ್ರಿಪುರಸುಂದರಿಯ ಸ್ಥಾನದಲ್ಲಿ ಸ್ಥಾಪಿಸಿ " ನವಚಕ್ರ ಸ್ವರೂಪಾವತಾರೇ, ನಾದಬ್ರಹ್ಮ ವಾಚಕ ತಾರೇ, ಶಿವ ಪರಮಾನಂದಾಮೃತ ಧಾರೇ, ಶೃಂಗಾರಾದಿ ನವರಸಧಾರೇ, ಪವನಧಾರಣ ಯೋಗ ವಿಚಾರೇ, "ಸುವರ್ಣಮಣಿ ಮಯಾದಿ ಪಚಶಿವ ಪರ್ಯಂಕ ವಿಹಾರೇ" ಎಂದು ಸ್ತುತಿಸಿದ್ದಾರೆ.

## Not at all

Your Real Life Partner is your body,
Once your body stops responding no one is with you
you and your body stay together from birth to death

# ಗಣಪತಿಪೂಜಾ ಮಹಾತ್ಮೆ

ಪ್ರತಿಯೊಬ್ಬರೂ ತಮ್ಮ ತಮ್ಮ ಕೆಲಸಗಳು ಪೂರ್ಣಗೊಳ್ಳಬೇಕೆಂದಾಗಲೂ, ಪುತ್ರಪೌತ್ರಾದಿಗಳ ಅಭಿವೃದ್ಧಿಗೂ, ವಿದ್ಯಾರಂಭಕಾಲದಲ್ಲೂ, ವ್ಯಾಪಾರ ವ್ಯವಸಾಯ ಪ್ರಾರಂಭಕಾದಲ್ಲೂ, ವಿಘ್ನಪರಂಪರೆಗಳ ನಾಸಕ್ಕೂ, ಶತ್ರುಬಾಧಾನಿವಾರಣೆಗೂ ಮೊದಲು ಪೂಜಿಸುವ ದೇವತೆ ಗಣಪತಿ. ಭಗವಂತನಾದ ಶ್ರೀಕೃಷ್ಣನೇ ಪಾಂಡವರಲ್ಲಿ ಹಿರಿಯನಾದ ಧರ್ಮರಾಯನಿಗೆ ಈ ಗಣಪತಿಪೂಜೆಯನ್ನು ಮಾಡಲು ತಿಳಿಸಿದನು. ಗಣಪತಿಯ ಅನುಗ್ರಹದಿಂದ ಮಾತ್ರಾ ಯಾವುದೇ ತೊಂದರೆಗಳು ಅಳಿಸಿಹೋಗಲು ಸಾಧ್ಯವೆಂದು ಹೇಳುತ್ತಾ, ಸಾಕ್ಷಾತ್ ಭಗವಂತನೇ ಆದ ತಾನೂ ಈ ಗಣಪತಿಯನ್ನು ಪೂಜಿಸಿದ ಕಾರಣದಿಮದ ಮಾತ್ರ. ತನ್ನ ಮೇಲಿನ ಆರೋಪಿಸಿದ್ದ ಹೀನ ಕಾರ್ಯಗಳೆಲ್ಲವೂ ನಿಷ್ಫಲವಾಗಿ, ಸುಖ, ನೆಮ್ಮದಿಯ ತನಗೆ ದೊರಕಿತು ಎಂದು ಹೇಳಿ ಈ ದೇವತೆಯ ಪೂಜಾ ವಿಧಾನ, ವ್ರತಕಥೆ ಎಲ್ಲವನ್ನೂ ವಿವರವಾಗಿ ತಿಳಿಸಿದನು ಎಂದು ಸೂತ ಮಹಾಮುನಿಯು ಶೌನಕಾದಿ ಮಹರ್ಷಿಗಳಿಗೆ ಹೇಳಿದನು.

ಪೂರ್ವದಲ್ಲಿ ತ್ರಿಪುರ ದಹನಕಾಲದಲ್ಲಿ ಪರಮೇಶ್ವರನು ಸಿದ್ಧಿ ವಿನಾಯಕನನ್ನು ಮೊದಲು ಪೂಜಿಸಿದಕಾರಣ, ತ್ರಿಪುರ ಸಂಹಾರ ಸಾಧ್ಯವಾಯಿತು. ಶ್ರೀ ರಾಮಚಂದ್ರನೂ ತನ್ನ ಸತಿಯಾದ ಸೀತಾದೇವಿಯನ್ನು ಹುಡುಕಲು ಹೊರಡುವಾಗ ಮೊದಲು ಗಣಪತಿಯನ್ನು ಪೂಜಿಸಿದನು. ಭಗೀರಥ ಮಹಾರಾಜನು ದೇವಗಂಗೆಯನ್ನು ಭೂಲೋಕಕ್ಕೆ ತರಲು ಹೊರಟಾಗ ಮೊದಲು ಗಣಪತಿಯನ್ನು ಪೂಜಿಸಿದನು. ಅಮೃತೋತ್ಪಾದನೆಗೆ ಮೊದಲು ದೇವಾಸುರರು ಗಣನಾಥನನ್ನು ಆರಾಧಿಸಿದರು. ಪಕ್ಷಿಗಳ ರಾಜ ಗರುತ್ಮಂತನು ದೇವಲೋಕದಿಂದ ಅಮೃತವನ್ನು ತರಲು ಹೊರಟ ಕಾಲದಲ್ಲಿ ತನ್ನ ಕಾರ್ಯಸಿದ್ಧಿಗಾಗಿ ಗಣಪತಿಯನ್ನು ಪೂಜಿಸಿದನು. ಶ್ರೀ ಕೃಷ್ಣರುಕ್ಮಿಣಿಯರು ಸಹ ಗಣಪತಿಯನ್ನು ಪೂಜಿಸಿದರು. ಕುಷ್ಠವ್ಯಾಧಿಯಿಂದ ತೊಂದರೆ ಪಡುತ್ತಿದ್ದ ಸಾಂಬನೆಂಬುವನೂ ಗಣನಾಥನನ್ನು ಆರಾಧಿಸಿರುತ್ತಾನೆ. ಆದ್ದರಿಂದಲೇ ಪ್ರತಿಯೊಬ್ಬರೂ, ಯಾವುದೇ ಕಾರ್ಯವನ್ನು ಪ್ರಾರಂಭಿಸುವ ಮೊದಲು ಇಂದಿಗೂ ಈ ಗಣಪತಿಯನ್ನು ಪೂಜಿಸುವುದು ಸಂಪ್ರದಾಯವಾಗಿ ಬೆಳೆದು ಬಂದಿದೆ.

ಹೀಗೆ ಹೇಳುತ್ತಾ, ಶ್ರೀ ಕೃಷ್ಣನು ಧರ್ಮರಾಯನಿಗೆ ಈ ವಿನಾಯಕ ವ್ರತಾಚರನಾ ವಿಧಾನವನ್ನು ತಿಳಿಯಪಡಿಸಿದನು.



"ಭಾದ್ರಪದ ಶುದ್ಧ ಚೌತಿಯ ದಿನದಂದು ಸೂರ್ಯೋದಯಕ್ಕೆ ಮುಂಚಿತವಾಗಿಯೇ ಸ್ನಾನ ಮಾಡಿ, ಸಂಧ್ಯಾವಂದನೆ ಮುಂತಾದ ನಿತ್ಯ ಕರ್ಮಗಳನ್ನು ಮಾಡಿಕೊಂಡು ಉಪವಾಸವಿದ್ದು ವಿನಾಯಕ ವ್ರತವನ್ನು ಆಚರಿಸಬೇಕು. ಆದರೆ ಯಾರು ಆ ದಿನ ಚಂದ್ರದರ್ಶನವನ್ನು ಮಾಡುತ್ತಾರೆಯೋ ಅವರು ಅಪವಾದಕ್ಕೆ ಗುರಿಯಾಗುವುದು ನಿಶ್ಚಿತ. ಇದರ ಪರಿಹಾರಾರ್ಥವಾಗಿ, ಶಮಂತಕೋಪಖ್ಯಾನವನ್ನು ಓದಬೇಕು. ಜೊತೆಗೆ ಈ ಕೆಳಗಿನ ಶ್ಲೋಕವನ್ನು ಜಪಿಸಬೇಕು. ಭಾದ್ರಪದ ಶುದ್ಧ ಚೌತಿಯ ದಿನ ಸೂರ್ಯನು ಕನ್ಯಾರಾಶಿಯನ್ನು ಸೇರಿರುವಾಗ ಚಂದ್ರದರ್ಶನವನ್ನು ಮಾಡಿವರು ಅಪವಾದಕ್ಕೆ ಖಂಡಿತಾ ಗುರಿಯಾಗುತ್ತಾರೆ. ಹಾಗಾಗಿ ಆ ದಿನ ಪ್ರತಿಯೊಬ್ಬರೂ ಗಣಪತಿಯನ್ನು ಪೂಜಿಸಿ, ಸಾಯಂಕಾಲ ವ್ರತಕಥೆಯನ್ನೂ ಶಮಂತಕೋಪಾಖ್ಯಾನವನ್ನು ಓದಿ, ಅಪವಾದದಿಮದ ವಿಮುಕ್ತರಾಗಬಹುದು.

ಶ್ಲೋಕ: ಸಿಂಹಃ ಪ್ರಸನ ಮವಧೀಃ ಸಿಂಹೋ ಜಾಂಬವತಾ ಹತ್ರಃ ।

ಸುಕುಮಾರಕ ಮಾ–ರೋದೀಃ ತವಹ್ಯೇಷ ಸ್ಯಮಂತಕಃ॥

ನಂದಿದೇಶ್ವರನು ಸನತ್ಕುಮಾರನಿಗೆ ಈ ಶ್ಲೋಕವನ್ನು ಹೇಳಿ ಶ್ರೀ ಮಹಾಗಣಪತಿ ವ್ರತದ ವಿಧಿ ವಿಧಾನಗಳನ್ನೂ, ಶಮಂತಕೋಪಾಖ್ಯಾನ ಕಥೆಯನ್ನೂ ವಿವರಿಸಿದನು.

**ವ್ರತಕಥೆ**

ಶ್ರೀಕೃಷ್ಣ ಬಲರಾಮರು ಭೂಭಾರವನ್ನು ತಗ್ಗಿಸುವುದಕ್ಕಾಗಿ ಭೂಲೋಕದಲ್ಲಿ ಜನಿಸಿದರು. ಜರಾಸಂಧನೆಂಬ ರಾಜನ ಕಿರುಕುಳದಿಂದಾಗಿ ಬೇಸತ್ತ ಶ್ರೀಕೃಷ್ಣನು ವಿಶ್ವಕರ್ಮನಿಂದ ದ್ವಾರಕಾಪಟ್ಟಣವನ್ನು ನಿರ್ಮಾಣ ಮಾಡಿಸಿ ಯಾದವರೆಲ್ಲರೂ ಅಲ್ಲಿ ವಾಸಿಸುವುದಕ್ಕೆ ಸಕಲ ಏರ್ಪಾಡುಗಳನ್ನೂ ಮಾಡಿಸಿದನು. ಈ ಪಟ್ಟಣದಲ್ಲಿ ರಾಜ ಉಗ್ರಸೇನನಿಗೆ ಸತ್ರಾಜೀತ, ಪ್ರಸೇನರೆಂಬ ಇಬ್ಬರು ಗಂಡುಮಕ್ಕಳಿದ್ದು, ಸತ್ರಾಜಿತನು ರಾಜನಾದಮೇಲೆ ಸೂರ್ಯದೇವನನ್ನು ಕುರಿತು ತಪಸ್ಸನ್ನಾಚರಿಸಿದಾಗ ಪ್ರಸನ್ನಗೊಂಡ ಸೂರ್ಯ ಭಗವಾನನು ಒಂದು ವರವನ್ನು ಕೊಡಲು ಇಚ್ಛೆಸಿದನು.

ಆಗ ಸತ್ರಾಜಿತನು ಸೂರ್ಯನು ಧರಿಸಿರುವ ಶಮಂತಕ ಮಣಿಯನ್ನು ಬೇಡಲು ಒಡನೆಯೇ ಸೂರ್ಯನು ಆ ಮಣಿಯನ್ನು ಸತ್ರಾಜಿತನಿಗೆ ಕೊಟ್ಟು. "ಈ ಮಣಿಯು ಸಕಲೈಶ್ವರ್ಯವನ್ನು ಕೊಡುವುದು. ಆದರೆ ಇದನ್ನು ಧರಿಸಿರುವವರು ಸದಾಚಾರ ಸಂಪನ್ನರಾಗಿರಬೇಕು" ಎಂಬ ಎಚ್ಚರಿಕೆಯನ್ನೂ ನೀಡಿದನು. ಅಶುಚಿಯಾಗಿರುವವನನ್ನು ಈ ಮಣಿಯು ನಾಶಪಡಿಸುತ್ತದೆ ಎಂದೂ ಹೇಳಿದನು. ಆ ಮಣಿಯನ್ನು ಧರಿಸಿ, ದ್ವಾರಕಾಪಟ್ಟಣಕ್ಕೆ ಉತ್ಸಾಹದಿಮದ ಬಂದ ರಾಜನನ್ನು ನೋಡಿದ ಜನರು ಸಾಕ್ಷಾತ್ ಸೂರ್ಯನೇ ಆಗಮಿಸುತ್ತಿದ್ದಾನೆಂದು ಭಾವಿಸಿದರು. ಬಹುಶಃ ಕೃಷ್ಣನನ್ನು ನೋಡಲು ಸೂರ್ಯನೇ ಬರುತ್ತಿರಬಹುದೆಂದು ಮಾತನಾಡಿಕೊಳ್ಳುತ್ತಿದ್ದ ಜನರಿಗೆ, ಹತ್ತಿರಕ್ಕೆ ಬಮದ ಆತ ಸೂರ್ಯನಲ್ಲವೆಂದೂ, ಸತ್ರಾಜಿತ ರಾಜನೆಂದೂ ತಿಳಿದರು. ಸತ್ರಾಜಿತನು ತನ್ನಲ್ಲಿ ಈ ಮಣಿಯಿದ್ದರೆ ಕೃಷ್ಣನು ಕೇಳಬಹುದೆಂದು ಶಂಕಿಸಿ, ತಮ್ಮನಾದ ಪ್ರಸೇನನಿಗೆ ಧರಿಸಲು ಹೇಳಿ ಕೊಟ್ಟುಬಿಟ್ಟನು. ಕೆಲ ಕಾಲಾನಂತರ ಒಮ್ಮೆ ಪ್ರಸೇನನು ಬೇಟೆಯಾಡಲು ಕುದುರೆಯನ್ನೇರಿ ಹೊರಟನು. ಕಾಡಿನ ಮಧ್ಯೆ ಸಿಂಹವೊಂದು ಪ್ರಸೇನನ್ನು ಕೊಂಡು ಆ ಹಾರವನ್ನು ತೆಗೆದುಕೊಂಡು ಹೋಗುತ್ತಿರುವಾ ಜಾಂಬವಂತನು ನೋಡಿ ಆ ಸಿಂಹವನ್ನು ಕೊಂದು ಮಣಿಯನ್ನು ತಾನು ತೆಗೆದುಕೊಂಡು ತನ್ನ ಗುಹೆಗೆ ಹೋಗಿ ಅಲ್ಲಿ ತನ್ನ ಮಗುವಿನ ತೊಟ್ಟಿಲಿಗೆ ಆ ಮಣಿಯನ್ನೇ ಕಟ್ಟಿ ಅಲಂಕರಿಸಿದನು. ಪ್ರಸೇನನ ಜೊತೆಯಲ್ಲಿ ಹೋದ ಶ್ರೀಕೃಷ್ಣನು ಬೇರೆ ದಾರಿಯನ್ನು ಅನುಸರಿಸಿ ಪರಸ್ಪರ ಒಬ್ಬರ ವಿಷಯ ಒಬ್ಬರಿಗೆ ತಿಳಿಯದೆ ಶ್ರೀಕೃಷ್ನನು ಏಕಾಂಗಿಯಾಗಿ ಊರಿಗೆ ಮರಳಿದನು. ಪ್ರಸೇನನು ಹಲವು ದಿನಗಳಾದರೂ ಹಿಂತಿರುಗಿ ಬರದಿದ್ದಾಗ, ಸತ್ರಾಜಿತನು ಶ್ರೀಕೃಷ್ಣನನ್ನೇ ಶಂಕಿಸಿ, ಬಹುಶಃ ಬಂಗಾರದ ಆಸೆಯಿಂದ ತನ್ನ ತಮ್ಮನಿಗೆ ಶ್ರೀಕೃಷ್ಣನೇ ಕೇಡು ಬಯಸಿರಬಹುದೆಂದು ಶಂಕಿಸಿ, ಕೃಷ್ಣನನ್ನು ದೂರಲು ಪ್ರಾರಂಭಿಸಿದನು. ತನ್ನ ಮೇಲೆ ಬಂದಿರುವ ಅಪವಾದವನ್ನು ದೂರಮಾಡಿಕೊಳ್ಳಲು ಶ್ರೀಕೃಷ್ಣನು ಸತ್ರಾಜಿತನೇ ಮೊದಲಾದ ಅನೇಕರೊಡಗೂಡಿ ಪುನಃ ಕಾಡಿಗೆ ಹೋದನು. ದಾರಿಯಲ್ಲಿ ಸಿಂಹದಿಂದ ಪ್ರಸೇನನೂ, ಅವನ ಕುದುರೆಯೂ ಕೊಲ್ಲಲ್ಪಟ್ಟಿರುವುದನ್ನೂ, ಇನ್ನೂ ಸ್ವಲ್ಪ ದೂರ ಹೋದ ನಂತರ ಸಿಂಹದ ಹೆಜ್ಜೆಗಳೂ, ಆ ನಂತರ ಆ ಸಿಂಹವನ್ನು ಕರಡಿಯೊಂದು ಕೊಂದು ಮುನ್ನಡೆದಿದ್ದ ಕರಿಡಿಯ ಹೆಜ್ಜೆಗಳನ್ನೂ ನೋಡಿದರು. ಆ ಹೆಜ್ಜೆಗಳನ್ನೇ ಅನುಸರಿಸಿ ಹೋದಾಗ ಒಂದು ದೊಡ್ಡ ಗುಹೆಯು ಕಣ್ಣಿಗೆ ಬಿತ್ತು. ಎಲ್ಲರನ್ನೂ ಹೊರಗಡೆಯೇ ಇರಲು ಹೇಳಿ, ಕೃಷ್ಣನು ಮಾತ್ರ ಗುಹೆಯೊಳಗೆ ಹೋದನು. ಆ ಗುಹೆಯೊಳಗೆಯಿದ್ದ ಅರಮನೆಯಲ್ಲಿ ಜಾಂಬವತೀ ಎಂಬ ಕನ್ನಯಯೂ ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ ತೂಗುತ್ತಿದ್ದಳು. ಶ್ರೀಕೃಷ್ಣನಿಗೆ ಆ ತೊಟ್ಟಿಲಿಗೆ ಕಟ್ಟಿದ ಮಣಿ ಕಾಣಿಸಿತು. ತನ್ನ ಎದುರಿಗೆ ನಿಂತಿದ್ದ ಸುಂದರ ಯುವಕನನ್ನು ನೋಡಿದ ಮಾತ್ರದಿಮದಲೇ ಜಾಂಬವತಿಯು ವಿರಹ ವೇದನೆಗೆ ಒಳಗಾದಳು. ಬಹುಶಃ ರತ್ನದ ಆಸೆಯಿಂದ ಇವನು ಬಂದಿರಬಹುದೆಂದೆಣಿಸಿ, ತನ್ನ ತಂದೆಯು ಏಳುವುದರ ಒಳಗೆ ಆ ರತ್ನವನ್ನು ತೆಗೆದುಕೊಂಡು ಹೊರಟು ಹೋಗಬೇಕೆಂದು ಪ್ರಾರ್ಥಿಸಿದಳು. ಆದರೆ ಮಂದಹಾಸವನ್ನು ಬೀರುತ್ತಾ, ಕೃಷ್ಣನು ತನ್ನ ಶಂಖವನ್ನು ಗಟ್ಟಿಯಾಗಿ ಊದಿದಾಗ ಎಚ್ಚರಗೊಂಡ ಜಾಂಬವತನು ಅಪರಿಚಿತನನ್ನು ನೋಡಿ ಸಿಟ್ಟಿಗೆದ್ದು ಅವನೊಡನೆ ಹೋರಾಡಲು ಪ್ರಾರಂಭಿಸಿದನು. ನಿರಂತರವಾಗಿ ಏಳು ದಿನಗಳಾದರೂ ಇವರ ಹೋರಾಟ ನಿಲ್ಲದೆ, ಶ್ರೀಕೃಷ್ಣನೂ ಹೊರಗೆ ಬಾರದಿದ್ದಾಗ, ಎಲ್ಲರೂ ದುಃಖಿತರಾಗಿ ಪಟ್ಟಣಕ್ಕೆ ಮರಳಿ, ಕೃಷ್ಣನ ಉತ್ತರಕ್ರಿಯೆಯನ್ನೂ ಮಾಡಿಬಿಟ್ಟರು. ಇತ್ತ ಗುಹೆಯಲ್ಲಿ 21 ದಿನಗಳ ಕಾಲ ನಿರಂತರವಾಗಿ ಯುದ್ಧ ನಡೆದು, ಕೊನೆಗೆ, ಕೃಷ್ಣನ ಪರಾಕ್ರಮವು ಹೆಚ್ಚಾದಹಾಗೆ, ಜಾಂಬವಂತನು ಬಳಲಿದನು. ಆಗ ಕೃಷ್ಣನೇ ಅವನಿಗೆ ಜ್ಞಾನೋದಯವನ್ನುಂಟು ಮಾಡಿದನು. ಆಗ ಜಾಂಬವಂತನು "ಆಯ್ಯಾ, ನನ್ನನ್ನು ಯಾರೂ ಸೋಲಿಸಲು ಸಾಧ್ಯವಿಲ್ಲ. ನಾನು ಶ್ರೀರಾಮಚಂದ್ರನ ಕಾಲದವನು. ಈಗ ನೀನು ನನ್ನನ್ನು ಸೋಲಿಸಬೇಕಾದರೆ ನೀನು ಶ್ರೀಮನ್ನಾರಾಯಣನೇ ಆಗಿರಬೇಕು" ಎಂದು ಸುತ್ತಿಸಲಾರಂಭಿಸಿದನು. ಕೃಷ್ಣನೆಂದು ಅರಿವಾದೊಡನೆ ತನ್ನಲ್ಲಿದ್ದ ಕೌಸ್ತುಭಮಣಿಯನ್ನೂ, ಕನ್ಯಾಮಣಿಯಾದ ಜಾಂಬವತಿಯನ್ನು ಶ್ರೀಕೃಷ್ಣನಿಗೆ ಕೊಟ್ಟು ವಿವಾಹವನ್ನು ಮಾಡಿದನು. ದ್ವಾರಕೆಗೆ ಹಿಂದಿರುಗಿದ ಕೃಷ್ಣನು ರಾಜಸಭೆಯಲ್ಲಿ ಎಲ್ಲರ ಸಮ್ಮುಖದಲ್ಲಿ ವಿಷಯವನ್ನು ತಿಳಿಸಿ, ಶ್ಯಮಂತಕ ಮಣಿಯನ್ನು ಸತ್ರಾಜಿತನಿಗೆ ಕೊಟ್ಟನು. ತನ್ನ ತಪ್ಪಿನ ಅರಿವಾದ ಸತ್ರಾಜಿತನು ಪಶ್ಚಾತ್ತಾಪಗೊಂಡು, ತನ್ನ ಕುವರಿ ಸತ್ಯಭಾಮೆಯನ್ನು, ಕೃಷ್ಣನಿಗೆ ಧಾರೆಯೆರೆದು ಕೊಟ್ಟು ಜೊತೆಯಲ್ಲಿ ಆ ಶ್ಯಮಂತಕಮಣಿಯನ್ನೂ ಕೃಷ್ಣನಿಗೆ ಧಾರೆ ಎರೆದುಕೊಟ್ಟನು. ಸತ್ರಾಜಿತನ ಈ ಕಾರ್ಯದಿಂದ ಅಸಮಾಧಾನಗೊಂಡ, ಅಕ್ರೂರ ಮುಂತಾದ ಬಾಂಧವರು ಸತ್ಯಾಜಿತನನ್ನು ದ್ವೇಷಿಸಲು ಪ್ರಾರಂಭಿಸಿದರು. ಪಾಂಡವರನ್ನು ನೋಡಲು ಕೃಷ್ಣನು ಹೋಗಿದ್ದ ಸಂದರ್ಭದಲ್ಲಿ ಶತಧನ್ವನು ಸತ್ರಾಜಿತನನ್ನು ಕೊಂದ ವಿಷಯವನ್ನು ಕೃಷ್ಣನು ಸತ್ಯಭಾಮಾಳಿಂದ ತಿಳಿದು ಖಿನ್ನನಾದವನಂತೆ ನಟಿಸುತ್ತಾ ಅಣ್ಣ

ಬಲರಾಮನನ್ನು ದುಷ್ಟನಿಗ್ರಹಕ್ಕೆ ಸಹಾಯ ಮಾಡೆಂದು ಕೇಳಿದನು. ವಿಷಯ ತಿಳಿದ ಶತಧನ್ವನು ಆ ಮಣಿಯನ್ನು ಅಕ್ರೂರನಿಗೆ ಕೊಟ್ಟು ತಾನು ಯಾತ್ರಾನೆಪದಲ್ಲಿ ಹೊರಟುಬಿಟ್ಟನು. ಆದರೆ ಬಲರಾಮಕೃಷ್ಣರು ಅವನನ್ನು ಹಿಂಬಾಲಿಸಿ, ಕೃಷ್ಣನು ಅವನನ್ನು ಕೊಂದನಾದರೂ, ಅವನ ಬಳಿ ರತ್ನವಿಲ್ಲವೆಂದು ತಿಳಿದುಬಂತು. ಬಲರಾಮನು ಕೃಷ್ಣನನ್ನೇ ನಿಂದಿಸಲು ಪ್ರಾರಂಭಿಸಿದನು. ವಿನಾಃಕಾರಣ ಬಂಧುಗಳನ್ನು ಕೃಷ್ಣನು ಕೊಲ್ಲುತ್ತಿರುವನೆಂದು ಬಲರಾಮನು ಕೃಷ್ಣನನ್ನು ದೂರಲು, ವಿವರವಾಗಿ ವಿಷಯವನ್ನು ಹೇಳಿ ಅಣ್ಣನನ್ನು ಸಮಾಧಾನಪಡಿಸಲು ಪ್ರಯುತ್ನಿಸಿದನಾದರೂ, ಖಿನ್ನಮನಸ್ಕನಾದ ಬಲರಾಮನು ವಿದರ್ಭ ದೇಶದತ್ತ ಪ್ರಯಾಣ ಹೊರಟು ಬಿಡುತ್ತಾನೆ. ದ್ವಾರಕೆಗೆ ಹಿಂದಿರುಗಿದ ಕೃಷ್ಣನನ್ನು ಎಲ್ಲರೂ ಹೆಣ್ಣು ಹೊನ್ನಿನ ಆಸೆಗಾಗಿ ಬಾಂಧವರನ್ನು ಕೊಲ್ಲುತ್ತಿರುವನೆಂದೂ, ಇದೇ ಉದ್ದೇಶದಿಂದ ಅಣ್ಣನನ್ನೂ ಎಲ್ಲಿಯೋ ಬಿಟ್ಟು ಬಂದಿರುವನೆಂದೂ ಆಕ್ಷೇಪಿಸುತ್ತಾರೆ. ಇತ್ತಕಡೆ ಅಕ್ರೂರನು ಮಣಿಯೊಂದಿಗೆ ಕಾಶೀಕ್ಷೇತ್ರಕ್ಕೆ ತೆರಳಿ, ಆ ಮಣಿಯ ಪ್ರಭಾವದಿಂದ ಹೆಚ್ಚು ಹೆಚ್ಚು ಬಂಗಾರವನ್ನು ಪಡೆದು, ಯಜ್ಞಯಾಗಾದಿಗಳನ್ನು ಮಾಡುತ್ತಾ ಸುಖದಿಂದಿರುತ್ತಾನೆ. ಕೆಲಕಾಲಾನಂತರ ತನ್ನ ಊರಿಗೆ ಹಿಂದಿರುಗಿದನು. ಸರ್ವಾಂತರ್ಯಾಮಿಯಾದ ಕೃಷ್ಣನಿಗೆ ಎಲ್ಲವೂ ತಿಳಿದಿದ್ದರೂ, ಏನೂ ತಿಳಿಯದವನಂತೆ ಇದ್ದನು. ಚಿಂತಾಕ್ರಾಂತನಾಗಿದ್ದ ಕೃಷ್ಣನನ್ನು ನೋಡಲು ನಾರದರು ಆಗಮಿಸಿ, ಚಿಂತೆಯಲ್ಲಿದ್ದ ಕೃಷ್ಣನನ್ನು ಅದಕ್ಕೆ ಕಾರಣವನ್ನು ಕೇಳಿದನು. ವಿಷಯವನ್ನು ತಿಳಿದು, ನಾರದರು ಕೃಷ್ಣನು ಭಾದಪ್ರದ ಚೌತಿಯದಿನ ಚಂದ್ರನ ದರ್ಶನ ಮಾಡಿದ ಪರಿಣಾಮವಾಗಿ ಹೀಗೆ ಅಪನಿಂದನೆಗೆ ಒಳಗಾಗುತ್ತಿರುವುದಾಗಿ ಹೇಳಿ, ಇದಕ್ಕೆ ಸಂಬಂಧಪಟ್ಟ ಪುರಾಣೋಕ್ತವಾದ ಕಥೆಯನ್ನು ಕೃಷ್ಣನಿಗೆ ಹೇಳಿ, ಪರಿಹಾರವನ್ನೂ ಸೂಚಿಸಿದರು.

ಹಿಂದೆ, ತಾನು ಬಹಳ ರೂಪವಂತನೆಂಬ ಗರ್ವದಿಂದ ಮೆರೆಯುತ್ತಿದ್ದ ಚಂದ್ರನು, ಲಂಬೋದರನಾದ ಗಣಪತಿಯನ್ನು ನೋಡಿ ಅಪಹಾಸ್ಯಮಾಡಿ ಶಾಪಕ್ಕೆ ಗುರಿಯಾದನು. ಅಂದಿನಿಮದ ಚೌತಿಯ ಚಂದ್ರನನ್ನು ಯಾರು ನೋಡುತ್ತಾರೋ ಅವರು ವ್ಯರ್ಥವಾದ ದೋಷಕ್ಕೆ ಗುರಿಯಾಗುತ್ತಾರೆ ಎಂದು ಹೇಳಿ ಈ ಕಥಾಸಂದರ್ಭವನ್ನು ವಿವರವಾಗಿ ಕೃಷ್ಣನಿಗೆ ತಿಳಿಸಿ ಹೇಳಿದನು. ಈ ಶಾಪದ ಪರಿಣಾಮವಾಗಿ ಕಂದಿದ ಮುಖದ ಚಂದ್ರನು ನೀರಿನ ಮಧ್ಯದಲ್ಲಿ ತಾವರೆ ಹೂವನ್ನು ಆಶ್ರಯಿಸಿ ನಿಂತಾಗ, ದೇವಾಧಿದೇವತೆಗಳಿಗೆ ಚಂದ್ರನಿಲ್ಲದೆ ಬಹಳ ತೊಂದರೆಯಾಗಿ, ಅವರೆಲ್ಲರೂ ಬ್ರಹ್ಮದೇವರ ಮೊರೆ ಹೊಕ್ಕರು. ಆಗ ಬ್ರಹ್ಮನು 'ಗಣಪತಿಯ ಶಾಪವನ್ನು ತಪ್ಪಿಸಲು ತ್ರಿಮೂರ್ತಿಗಳಿಗೂ ಸಾಧ್ಯವಿಲ್ಲ. ಅವನು ಕೊಟ್ಟ ಶಾಪವು ಅವನಿಂದಲೇ ಉಪಶಮನವಾಗಬೇಕು. ಆದ್ದರಿಂದ ಚಂದ್ರ ಗಣಪತಿಯನ್ನೇ ಮೊರೆ ಹೋಗಬೇಕು' ಎಂದು ಹೇಳಿ ಗಣಪತಿಯು ಪ್ರಸನ್ನನಾಗತಕ್ಕ ಬಗೆಯನ್ನು ದೇವತೆಗಳಿಗೆ ತಿಳಿಸಿದನು.

ಭಾದ್ರಪದ ಶುದ್ಧ ಚೌತಿಯ ದಿನ ಗಣೇಶನಿಗೆ ವಿಧಿಯುಕ್ತವಾಗಿ ಪೂಜೆಮಾಡಬೇಕು. ಪ್ರದೋಷ ಕಾಲದಲ್ಲಿ ಪೂಜೆಗೆ ಉಪಕ್ರಮವನ್ನು ಮಾಡಿ ಚಂದ್ರೋದಯಕ್ಕೆ ಸರಿಯಾಗಿ ಚಂದ್ರನಿಗೆ ಅರ್ಘ್ಯವನ್ನು ಕೊಡಬೇಕು. ಈ ವ್ರತವನ್ನು ಸಂಕಷ್ಟಹರ ಗಣಪತಿ ವ್ರತವೆಂದು ಕರೆಯುತ್ತಾರೆ. ಕಡುಬು, ಪಾಯಸ ಮುಂತಾದ ಮಧುರ ಭಕ್ಷ್ಯಗಳನ್ನು ಗಣಪತಿಗೆ ನೈವೇದ್ಯಮಾಡಬೇಕು. ಷೋಡಶೋಪಚಾರಕ್ರಮದಲ್ಲಿ ಪೂಜಿಸಬೇಕು. ಬ್ರಹ್ಮನಿಂದ ಈ ವ್ರತನ್ನು ತಿಳಿದ ದೇವತೆಗಳು ಚಂದ್ರನ ಕೈಯಲ್ಲಿ ಈ ವ್ರತವನ್ನು ಮಾಡಿಸಿದರು. ಈ ಪೂಜೆಯಿಂದ ಸಂತೃಪ್ತನಾದ ಗಣಪತಿಯು ಚಂದ್ರನ ಮೇಲೆ ಬಂದಿದ್ದ ಶಾಪವನ್ನು ವಿಮೋಚನಗೊಳಿಸಿದನು.



**ಶ್ರೀಮತಿ ಇಂದಿರಾ ಗೋವಿಂದ್**
ಮೈಸೂರು

(ಈ ಲೇಖಕರೇ ಪುಟ ಸಂಖ್ಯೆ 4ರಲ್ಲಿರುವ ಸ್ವರ್ಣಗೌರಿ ವ್ರತದ ಬಗ್ಗೆಯೂ ಬರೆದಿರುತ್ತಾರೆ)

**ನಿಮಗೆ ತಿಳಿದಿರಲಿ**

**ಹ್ಯಾಪಿ ಫ್ಯಾಮಿಲಿ**

ಕುಟುಂಬಕ್ಕಿಂತ ದೊಡ್ಡದು– ಸಂಪತ್ತು ಅಲ್ಲ
ತಂದೆಗಿಂತ ದೊಡ್ಡವರು– ಸಲಹೆಗಾರನಿಲ್ಲ
ತಾಯಿಗಿಂತ ದೊಡ್ಡವರು– ಈ ಪ್ರಪಂಚದಲ್ಲಿಲ್ಲ
ಸಹೋದರನಿಗಿಂತ ಉತ್ತಮ– ಪಾಲುದಾರನಿಲ್ಲ
ಸಹೋದರಿಗಿಂತ ಉತ್ತಮ– ಹಿತೈಷಿ ಇಲ್ಲ
ಮಡದಿಗಿಂತ ದೊಡ್ಡ – ಸ್ನೇಹಿತರಿಲ್ಲ
ಮಕ್ಕಳಿಗಿಂತ ದೊಡ್ಡ– ಜೊತೆಗಾರ ಇಲ್ಲ
ಆದ್ದರಿಂದ ಕುಟುಂಬವಿಲ್ಲದೆ ಜೀವನವಿಲ್ಲ

# ಆಧ್ಯಾತ್ಮ ಗಣಿತ ಚಮತ್ಕಾರ; 24 ವಿಷ್ಣು ನಾಮಗಳ ರಹಸ್ಯ

ಉದಾಹರಣೆಗೆ 1 ವಸ್ತುವಿಗೆ ಒಂದೇ ಸ್ಥಾನವಾದ್ದರಿಂದ 1x1=1. ಆದರೆ 2 ವಸ್ತುಗಳಿಗೆ ಎರಡು ಸ್ಥಾನಗಳಿರುವ ಕಾರಣ 2ನ್ನು ಅದರ ಹಿಂದಿನ ಅಂಕಿಯಾದ 1 ರಿಂದ ಗುಣಿಸಿದರೆ 2x1=2 ಆಗುತ್ತದೆ. ಹೀಗೆ 2 ಸಂಖ್ಯೆಯ ವಸ್ತುಗಳ ಸ್ಥಾನಾಂತರಿತ ವಿನ್ಯಾಸ 2. ಹೀಗೆಯೇ 3 ವಸ್ತುಗಳಿಗೆ 3x2x1=6 ಆಗುತ್ತದೆ.

ಇದೇ ರೀತಿ ವಿಷ್ಣುವಿನ ನಾಲ್ಕು ಕೈಗಳು ಎಂಬ ನಾಲ್ಕು ಸ್ಥಾನಗಳಿರುವ ಶಂಖ, ಚಕ್ರ, ಗದಾ, ಪದ್ಮ ಎಂಬ ನಾಲ್ಕು ವಸ್ತುಗಳ ಸ್ಥಾನಾಂತರಿತ ಸಂಯೋಜನಾ ವಿನ್ಯಾಸದ ಸಂಖ್ಯೆ 4x3x2x1=24 ಆಗುತ್ತದೆ. ಇದನ್ನೇ ಲೀಲಾವತಿ ಗಣಿವು ನಾಲ್ಕು ವಸ್ತುಗಳಿಂದ 24 ಮೂರ್ತಿಭೇದಗಳನ್ನು ಸಾಧಿಸಬಹುದು ಎಂದು ತನ್ನ ಪ್ರಶ್ನೆಗೆ ಉತ್ತರವಾಗಿ ಹೇಳಿದೆ. ಹೀಗೆ 12ನೆಯ ಶತಮಾನದ ಲೀಲಾವತಿ ಗಣಿತದ ಕಾಲಕ್ಕೆ ಅಥವಾ ಅದಕ್ಕೂ ಬಹಳ ಮೊದಲೇ ಪರ್ಮುಟೇಷನ್ ಅಂಡ್ ಕಾಂಬಿನೇಷನ್‌ನ ಗಣಿತ ರಹಸ್ಯವು ಭಾರತೀಯರಿಗೆ ಸ್ಪಷ್ಟವಾಗಿ ಗೊತ್ತಿತ್ತು ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

ಈ ಲೇಖನದಲ್ಲಿ ವಿಷ್ಣುವಿನ ಹಸ್ತಾಯುಧಾಧರಿತ ಮೂರ್ತಿರೂಪಭೇದಗಳ ಬಗ್ಗೆ ವಿಮರ್ಶಿಸುತ್ತಿರುವುದರಿಂದ ಶಿವನ ರೂಪಭೇದಗಳ ಪ್ರಶ್ನಭಾಗವು ಇಲ್ಲಿ ಅಷ್ಟು ಪ್ರಸ್ತುತವಲ್ಲ. ಆದರೂ ವಿಷ್ಣುವಿನ ಮೂರ್ತಿ ಭೇದಗಳಂತೆ ಶಿವನ ಮೂರ್ತಿಭೇದಗಳು ಏಕೆ ಬಳಕೆಗೆ ಬರಲಿಲ್ಲ? ಎಂಬ ಪ್ರಶ್ನೆಯನ್ನು ಸಂಕ್ಷಿಪ್ತವಾಗಿ ಗಮನಿಸುವುದಾದರೆ ಶಿವನ 10 ಕೈಗಳಲ್ಲಿ ಇರುವ 10 ವಸ್ತುಗಳನ್ನು ಪರಸ್ಪರ ಸ್ಥಾನಾಂತರಿಸಿ ಸಂಯೋಜಿಸಿದರೆ ಸಾಧಿಸಬಹುದಾದ ಮೂರ್ತಿರೂಪಗಳು ಎಷ್ಟು? ಎಂಬ ಪ್ರಶ್ನೆಗೆ ಉತ್ತರವನ್ನು ತಿಳಿಯಲು ಸಾಧ್ಯವಾದರೆ ಶಿವನ ಕೈಯ ವಸ್ತುಗಳನ್ನು ಪರಸ್ಪರ ಕೈ ಬದಲಿಸಿಟ್ಟು ಉತ್ತರವನ್ನು ನೇರವಾಗಿ ಪಡೆಯಬಹುದು. ಅಥವ 10ನ್ನು ಅದರ ಹಿಂದಿನ 1ರವರೆಗಿನ ಸಂಖ್ಯೆಯಾದ ಗುಣಿಸಿ ಪರ್ಯಾಯವಾಗಿಯೂ ಪಡೆಯಬಹುದು. ಅಂದರೆ 10x9x8x7x6x5x4x3x2x1=? ಈ ಸಮೀಕರಣಕ್ಕೆ ಉತ್ತರವಾಗಿ ಸಿಗುವ ಮೊತ್ತ 36,28,800! ಅಂದರೆ 10 ವಸ್ತುಗಳಿಂದ ಸಾಧಿತವಾಗುವ ಶಿವನ ಮೂರ್ತಿ ವೈವಿಧಗಳ ಸಂಖ್ಯೆ 36 ಲಕ್ಷಕ್ಕೂ ಹೆಚ್ಚು! ಇಷ್ಟು ಸಂಖ್ಯೆಯ ಮೂರ್ತಿಗಳನ್ನು ದೇವಾಲಯದ ಗೋಡೆಯಲ್ಲಿ ಅಳವಡಿಸಲು ಯತ್ನಿಸಿದರೆ ಕನಿಷ್ಟ ಒಂದು ಅಡಿ ಅಗಲದ ಮೂರ್ತಿಗಳನ್ನು ಮಾಡಿದರೂ 36 ಲಕ್ಷ ಅಡಿಗಳಿಗೂ ಹೆಚ್ಚು ಉದ್ದದ, ಅಂದರೆ 10 ಸಾವಿರ ಕಿ.ಮೀ. ಉದ್ದದ ಭಿತ್ತಿ (ಗೋಡೆ) ಬೇಕಾಗುತ್ತದೆ. ಇದು ಸುಲಭ ಸಾಧ್ಯವಾಗಲಿ, ಸುಲಭಗ್ರಾಹ್ಯವಾಗಲಿ ಅಲ್ಲ. ಅದಲ್ಲದೆ ಶಿವನಿಗೆ ಏಕಾದಶ (11) ರುದ್ರರೂ, ಚತುಷ್ಷಷ್ಟಿ ಭೈರವರು ಮುಂತಾದ ರೂಪಭೇದಗಳೂ ಇದ್ದು ಶಿವನ ಮೂರ್ತಿರೂಪ ಪರಿಕಲ್ಪನೆಗೆ ಅವೇ ಯಥೇಚ್ಛವಾಗಿರುವುದರಿಂದ ಶಿವನ 10 ವಸ್ತುಗಳ ಸ್ಥಾನಾಂತರಿತ ವಿನ್ಯಾಸಗಳನ್ನು ಬಳಕೆಗೆ ತರುವುದು ವಸ್ತುತಃ ಸಾಧ್ಯವಾಗಿರಲಾರದು. ಇದೇ ರೀತಿ ವಿಷ್ಣುವಿನ ಷಡ್ಭುಜ, ಅಷ್ಟಭುಜ ಮುಂತಾದ ಮೂರ್ತಿಗಳಿಂದ ಆಗಬಹುದಾದ ಸ್ಥಾನಾಂತರಿತ ವಿನ್ಯಾಸಗಳನ್ನು ಬಳಕೆಗೆ ತರದೇ ಕೇವಲ ನಾಲ್ಕು ವಸ್ತುಗಳಿಗೆ ಸೀಮಿತಗೊಳಿಸಿರಬೇಕು. ಆದ್ದರಿಂದ ಆ ಪ್ರಶ್ನೆಯನ್ನು ಇಲ್ಲಿಗೆ ಬಿಟ್ಟು ಈಗ ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳ ಗಣಿತಾಧಾರಿತ ಹಿನ್ನೆಲೆಯನ್ನು ಗಮನಿಸೋಣ.

ಇದೇ ರೀತಿ ವಿಷ್ಟುವಿನ ನಾಲ್ಕು ಕೈಗಳು ಎಂಬ ನಾಲ್ಕು ಸ್ಥಾನಗಳಿರುವ ಶಂಖ, ಚಕ್ರ, ಗದಾ, ಪದ್ಮ ಎಂಬ ನಾಲ್ಕು ವಸ್ತುಗಳ ಸ್ಥಾನಾಂತರಿತ ಸಂಯೋಜನಾ ವಿನ್ಯಾಸದ ಸಂಖ್ಯೆ 4x3x2x1=24 ಆಗುತ್ತದೆ. ಇದನ್ನೇ ಲೀಲಾವತಿ ಗಣಿತವು'ನಾವು ವಸ್ತುಗಳಿಂದ 24 ಮೂರ್ತಿಭೇದಗಳನ್ನು ಸಾಧಿಸಬಹುದು! ಎಂದು ತನ್ನ ಪ್ರಶ್ನೆಗೆ ಉತ್ತರವಾಗಿ ಹೇಳಿದೆ. ಹೀಗೆ 12ನೇಯ ಶತಮಾನದ ಲೀಲಾವತೀ ಗಣಿತದ ಕಾಲಕ್ಕೆ ಅಥವಾ ಅದಕ್ಕೂ ಬಹಳ ಮೊದಲೇ ಪರ್ಮುಟೇಷನ್ ಅಂಡ್ ಕಾಂಬಿನೇಷನ್ ನ ಗಣಿತ ರಹಸ್ಯವು ಭಾರತೀಯರಿಗೆ ಸ್ಪಷ್ಟವಾಗಿ ಗೊತ್ತಿತ್ತು ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

ಈ ಲೇಖನದಲ್ಲಿ ವಿಷ್ಟುವಿನ ಹಸ್ತಾಯು ಧಾಧರಿತ ಮೂರ್ತಿರೂಷಭೇದಗಳ ಬಗ್ಗೆ ವಿಮರ್ಶಿಸುತ್ತಿರುವುದರಿಂದ ಶಿವನ ರೂಪಭೇದಗಳ ಪ್ರಶ್ನಭಾಗವು ಇಲ್ಲಿ ಅಷ್ಟು ಪ್ರಸ್ತುತವಲ್ಲ. ಆದರೂ ವಿಷ್ಣುವಿನ ಮೂರ್ತಿ ಭೇದಗಳಂತೆ ಶಿವನ ಮೂರ್ತಿಭೇದಗಳು ಏಕೆ ಬಳಕೆಗೆ ಬಜಲಿಲ್ಲ? ಎಂಬ ಪ್ರಶ್ನೆಯನ್ನು ಸಂಕ್ಷಿಪ್ತವಾಗಿ ಗಮನಿಸುವುದಾದರೆ ಶಿವ 10 ಕೈಗಳಲ್ಲಿ ಇರುವ 10 ವಸ್ತುಗಳನ್ನು ಪರಸ್ಪರ ಸ್ಥಾನಾಂತರಿಸಿ ಸಂಯೋಜಿಸಿದರೆ ಸಾಧಿಸಬಹುದಾದ ಮೂರ್ತಿರೂಪಗಳು ಎಷ್ಟು ? ಎಂಬ ಪ್ರಶ್ನೆಗೆ ಉತ್ತರವನ್ನು ತಿಳಿಯಲು–ಸಾಧ್ಯವಾದರೆ ಶಿವನ ಕೈಯ ವಸ್ತುಗಳನ್ನು ಪರಸ್ಪರ ಕೈ ಬದಲಿಸಿಟ್ಟು ಉತ್ತರವನ್ನು ವೇರವಾಗಿ ಪಡೆಯಬಹುದು. ಅಥವಾ 10ನೇ ಅದರ ಹಿಂದಿನ 1 ರವರೆಗಿನ ಸಂಖ್ಯೆಯಿಂದ ಗುಣಿಸಿ ಪರ್ಯಾಯವಾಗಿಯೂ ಪಡೆಯಬಹುದು. ಅಂದರೆ 10x9x7x6x5x4x3x2x1=? ಈ ಸಮೀಕರಣಕ್ಕೆ ಉತ್ತರವಾಗಿಸಿಗುವ ಮೊತ್ತ 36,28,800! ಅಂದರೆ 10 ವಸ್ತುಗಳಿಂದ ಸಾಧಿತವಾಗುವ ಶಿವನ ಮೂರ್ತಿ ವೈವಿಧಗಳ ಸಂಖ್ಯೆಯ36 ಲಕ್ಷಕ್ಕೂ ಹೆಚ್ಚು! ಇಷ್ಟು ಸಂಖ್ಯೆಯ ಮೂರ್ತಿಗಳನ್ನು ದೇವಾಲಯದ ಗೋಡೆಯಲ್ಲಿ ಅಳವಡಿಸಲು ಯತ್ನಿಸಿದರೆ ಕನಿಷ್ಟ ಒಂದು ಅಡಿ ಆಗಲದ ಮೂರ್ತಿಗಳನ್ನು ಮಾಡಿದರೂ 36 ಲಕ್ಷ ಅಡಿಗಳಿಗೂ ಹೆಚ್ಚು ಉದ್ದದ, ಅಂದರೆ 10 ಸಾವಿರ ಕಿ.ಮೀ ಉದ್ದದ ಭಿತ್ತಿ ( ಗೋಡೆ) ಬೇಕಾಗುತ್ತದೆ. ಇದು ಅದಲ್ಲದೆ ಶಿವನಿಗೆ ಏಕಾದಶ (11) ರುದ್ರರೂ, ಚತುಷ್ಷಷ್ಟಿ ಭೈರವರು ಮುಂತಾದ ರೂಪಭೇದಗಳೂ ಇದ್ದು ಶಿವನ ಮೂರ್ತಿರೂಪ ಪರಿಕಲ್ಪನೆಗೆ ಅವೇ ಯಥೇಚ್ಚವಾಗಿರುವುದುರಿಂದ ಶಿವನ 10ವಸ್ತುಗಳ ಸ್ಥನಾಂತರಿಕ ವಿನ್ಯಾಸಗಳನ್ನು ಬಳಕೆಗೆ ತರುವುದು ವಸ್ತುತ: ಸಾಧ್ಯವಾಗಿರು

ಲಾರದು, ಇದೇ ರೀತಿ ವಿಷ್ಣುವಿನ ಷಡ್ಭುಜ, ಅಷ್ಟಭುಜ ಮುಂತಾದ ಮೂರ್ತಿಗಳಿಂದ ಆಗಬಹುದಾದ ಸ್ಥಾನಾಂತರಿತ ವಿನ್ಯಾಸಗಳನ್ನು ಬಳಕೆಗೆ ಗರದೇ ಕೇವಲ ನಾಲ್ಕು ವಸ್ತುಗಳಿಗೆ ಸೀಮಿತಗೊಳಿ ಸಿರಬೇಕು, ಆದ್ದರಿಂದ ಆ ಪ್ರಶ್ನೆರ್ನಿಂಶತಿ ಮೂರ್ತಿಗಳ ಗಣಿತಾಧಾರಿತ ಹಿನ್ನೆಲೆಯನ್ನು ಗಮನಿಸೋಣ.

ವಿಷ್ಟು ಚತುರ್ವಿಂಶತಿಯ 24 ಮೂರ್ತಿರೂಪ ಭೇದಗಳಿಗೆ ವಿಷ್ಣುವಿನ ನಾಲ್ಕು ಹಸ್ತಗಳು ಹಾಗೂ ನಾಲ್ಕ ಆಯುಧಗಳು ಮೂಲಭೂತ ಕಾರಣಗಳಾಗಿವೆ ಎಂಬುದನ್ನು ಗಮನಿಸಿದೆವು. ನಮ್ಮ ಪುರಾತನ ಇಣಿತಶಾಸ್ತ್ರ ಪರಂಪರೆಯ ಆಧಾರದಲ್ಲಿ ಇಲ್ಲಿಗೆ ಒಂಭತ್ತು ಶತಮಾನಗಳಿತೂ ಮುನ್ನವೇ ವಿಷ್ಣುವಿನ ನಾಲ್ಕು ಕೈಗಳಲ್ಲಿರುವ ಶಂಖ, ಪದ್ಮ, ಗದಾ, ಚಕ್ರ ಎಂಬ ನಾಲ್ಕು ವಸ್ತುಗಳನ್ನು ಪರಸ್ಪರ ಸ್ಥಾನಾಂತರಗೊಳಿಸಿ ಬೇರೆ ಬೇರೆ ಕೈಗಳಲ್ಲಿ ಇಡುತ್ತಾ ಹೋದರೆ ಎಷ್ಟು ಸಂಯೋಜಿತ ಮೂರ್ತಿ ವಿನ್ಯಾಸಗಳನ್ನು ಸಾಧಿಸಬಹುದು ಎಂಬ ಪ್ರಶ್ನೆಯನ್ನೂ ಅದಕ್ಕೆ ಉತ್ತರವಾಗಿ ಗರಿಷ್ಠ 24 ವಿನ್ಯಾಸಗಳು ಎಂಬುದನ್ನು ನೋಡಿದೆವು, 24ಕ್ಕಿಂತಲೂ ಹೆಚ್ಚು ಮೂರ್ತಿಗಳನ್ನು ರೂಪಿಸಲು ಸಾಧ್ಯವೇ ಇಲ್ಲ ಎಂಬುದೂ ಅನುಭವ ಜನ್ಮ ಸಿದ್ಧಾಂತ, ಆದ್ದರಿಂದ ಸಾವಿರ ಹೆಸರುಗಳಿದ್ದರೂ ವಿಷ್ಣುವಿಗೆ 24 ಮೂರ್ತಿರೂಪಗಳನ್ನು ಅಂಕಿತಗೊಳಿಸುವುದು, ಅದಕ್ಕೆ ನಾಮಕರಣ ಮಾಡುವುದು ಅನಿವಾರ್ಯವೂ ಆಗಿತ್ತು ಎಂಬುದು ಇಲ್ಲಿ ಗಮನಾರ್ಹ. ಈ ಪ್ರತಿಯೊಂದು ಮೂರ್ತಿ ವಿನ್ಯಾಸಕ್ಕೂ ಕೇಶವ ಮೊದಲಾದ 24 ನಿರ್ದಿಷ್ಟನಾಮಕರಣಗಳಿವೆ ಎಂಬುದನ್ನು ಈ ಮುನ್ನ ಗಮನಿಸಿದ್ದೇವೆ.

ಹಾಗಾದರೆ ಈ ಚತುರ್ವಿಂಶತಿ (24) ಮೂರ್ತಿ ವೈವಿಧ್ಯಗಳಲ್ಲಿ ಯಾವ ಹೆಸರಿನ ಮೂರ್ತಿಯ ಯಾವ ಯಾವ ಕೈಗಳಲ್ಲಿ ಯಾವ ಯಾವ ಆಯುಧಗಳಿರುತ್ತವೆ? ಎಂಬುದನ್ನು ಈ ಮುನ್ನಗಮನಿಸಿದ್ದೇವೆ.

ಈ ಪ್ರಶ್ನೆಗೆ ಉತ್ತರ ಹುಡುಕುವಾಗ ವಿಷ್ಣುವಿನ ಆಯುಧಗಳು ಯಾವುವು? ನಾಲ್ಕು ಮಾತ್ರವೇ ವಿಷ್ಣುವಿನ ಆಯುಧಗಳೇ? ಇನ್ನು ಬೇರೆ ಇವೆಯೇ ? ಇದ್ದರೆ ಅವು ಯಾವುವು? ಅವುಗಳ ಹಿನ್ನೆಲೆ ಏನು? ಧಾರ್ಮಿಕ ಸಂಪ್ರದಾಯಸ್ಥರು ಇವನ್ನು ಹೇಗೆ ಮತ್ತು ಯಾವ ರೀತಿಗಳಲ್ಲಿ ಸ್ವೀಕರಿಸಿದ್ದಾರೆ. ಮುಂತಾದ ಅನೇಕ ಉಪ ಪ್ರಶ್ನೆಗಳು ಎದುರಾಗುತ್ತವೆ. ಇವನ್ನೆಲ್ಲ ಸಮಷ್ಠಿಯಾಗಿ, ಆಳವಾಗಿ ವಿಮರ್ಶಿಸಿದರೆ ಕುತೂಹಲವು ತಣಿಯದೆ ಬೆಳೆಯುತ್ತಲೇ ಹೋಗುತ್ತದೆ! ವಿಷ್ಣುವಿಗೆ ಶಂಖ, ಚಕ್ರ, ಗದಾ, ಪದ್ಮ ಎಂಬ ನಾಲ್ಕು ಮಾತ್ರವೇ ಅಲ್ಲದೆ ಅವುಗಳ ಜೊದೆಗೆ ಬಿಲ್ಲು, ಕತ್ತಿ ಮುಂತಾದ ಆಯುಧಗಳೂ ಇವೆ. (ಇದೇನೂ ವಿಶೇಷವಲ್ಲ, ಏಕೆಂದರೆ ಪರರಾಣಗಳನ್ನು ಗಮನಿಸಿದರೆ ಪ್ರತಿಯೊಬ್ಬ ಪ್ರಮುಖ ವ್ಯಕಿಗೂ ಅವನದೇ ಆದ ಶಂಖ, ಗದೆ,ಬಿಲ್ಲು, ಕೂಡಲಿ ಮುಂತಾದ ಒಂದು ಆಥವಾ ಅನೇಕ ಆಯುಥಗಳು ಇರುತ್ತವೆ. ಉದಾಹರಣೆಗೆ ರಾಮನಬಿಲ್ಲು, ಭೀಮನ ಗದೆ, ಕೃಷ್ಣನ ಶಂಖ–ಚಕ್ರ, ರವಣನ ಖಡ್ಗ, ಭಾರ್ಗವರಾಮನ ಪರಶು, ಬಲರಾಮನ ನೇಗಿಲು, ದಂದ್ರನ ವಜ್ರ, ಕಾಮನ–ಬಿಲ್ಲು ಇತ್ಯಾದಿ, ಹಾಗೆಯೇ ವಿಷ್ಣುವಿಗೂ ಅವನದೇ ಆದ ಆಯುಧಗಳಿವೆ) ಅವಕ್ಕೆ ನಿರ್ದಿಷ್ಟ ಹೆಸರುಗಳೂ ಇವೆ, ವಿಷ್ಣುವಿನ ಶಂಖಕ್ಕೆ ಪಾಂಚಜನ್ಯ ಎಂದೂ, ಚಕ್ರಕ್ಕೆ ಸುದರ್ಶನ ಎಂದೂ, ಗದೆಗೆ ಕೌಮೋದಕಿ ಎಂದೂ ಹೆಸರು. ಪದ್ಮಕ್ಕೆ ಕಮಲದ ಅನೇಕ ಪರ್ಯಾಯ ನಾಮಗಳನ್ನು ಬಳಸಲಾಗುತ್ತದೆ. ವಿಷ್ಣುವಿನ ಕತ್ತಿಗೆ–ನಂದಕ ಬಿಂದೂ, ಬಿಲ್ಲಿಗೆ–ಸಾರ್ಙ್ಗ ಎಂದೂ ಹೆಸರು. ಇವುಗಳೊಂದಿಗೆ ಬಾಣ, ಗುರಾಣಿ ಮುಂತಾದ ಆಯುಧೋಪಾಂಗಗಳೂ ಇದೆ.

ಶಂಖ, ಚಕ್ರ, ಪದ್ಮ, ಬಿಲ್ಲು, ಬಾಣ, ಮುಸಲ ಈ ಪೈಕಿ ನಾಲ್ಕಕ್ಕಿಂತ ಹೆಚ್ಚು ಆಯುಧಗಳನ್ನು ಹೊಂದಿರುವ ವಿಷ್ಣುವಿನ ಮೂರ್ತಿ ಶಿಲ್ಪಗಳೂ ಇವೆ. ಬೇಲೂರು ಚೆನ್ನಕೇಶವ ಕೇವಾಲಯದ ಭಿತ್ತಿಯಲ್ಲಿ ನಾಲ್ಕು ಕೈಗಳಲ್ಲಿ ಬಿಲ್ಲೂ ಸೇರಿದಂತೆ 5 ಆಯುಧಗಳನ್ನು ಹಿಡಿದಿರುವ ಹಾಗೂ ತುಮಕೂರು ಜಿಲ್ಲೆ ಅರಳುಗುಪ್ಪೆ ಕೇಶವ ದೇವಾಲಯದಲ್ಲಿ ಆರು ಭುಜಗಳಲ್ಲಿ ಚಕ್ರಾಯುಧಗಳೊಂದಿಗೆ ಬಿಲ್ಲು, ಬಾಣಗಳನ್ನು ಹಿಡಿದಿರುವ ಮೂರ್ತಿಗಳನ್ನು ಗಮನಿಸಬಹುದು. ವಿಷ್ಣುವಿನ ಆಯುಧಗಳಿಗೆ ಭಾರತೀಯ ಆಧ್ಯಾತ್ಮವು ತುಂಬಾ ಗೌರವವನ್ನು ನೀಡಿದೆ, ಭಾಗವತವು ವಿಷ್ಣುವಿನ ಈ ಆಯುಧಗಳನ್ನು ಕುರಿತು ಪರಮಾತ್ಮನ ಶುದ್ಧತತ್ವವೇ ಪದ್ಮ, ಪ್ರಾಣ ತತ್ವವೇ ಗದೆ, ಜಲತತ್ವವೇ ಶಂಖ, ತೇಜೋತತ್ವವೇ ಚಕ್ರ, ಆಕಾಶತತ್ವವೇ ಕತ್ತಿ, ಕಾಲತತ್ವವೇ ಬಿಲ್ಲು ಎಂದು ವರ್ಣಿಸಿದೆ ( ಸ್ವಂದ12, ಅಧ್ಯಾಯ 11). ಈ ಆಯುಧಗಳು ವಿಷ್ಣುವಿಗೆ ಲಭಿಸಿದ ಬಗ್ಗೆಯೂ ಕಥೆಗಳಿವೆ, ವಿಶ್ವಕರ್ಮನು ಸೂರ್ಯನಿಗೆ ಸಾಣೆ ಹಿಡಿದಾಘ ಸಿಡಿದು ಬಿದ್ದ ಕಿರಣಗಳಿಂದ ದೇವಶಿಲ್ಪಯು ಸುದರ್ಶನ ಚಕ್ರವನ್ನು ತಯಾರಿಸಿದನು. ಪಂಚಜನ ಎಂಬ ಪೌರಾಣಿಕ ಕಥೆಗಳೂ ಜನಪ್ರಿಯವಾಗಿವೆ.

ವಿಷ್ಣುವಿನ ಪತ್ನಿ ಲಕ್ಷ್ಮೀದೆವಿತೂ ಶಂಖಚಕ್ರಗಳು ಹಸ್ತವಸ್ತುಗಳಾಗಿರುತ್ತವೆ. ದ್ವಿಭುಜ ಲಕ್ಷ್ಮಿಯ ಎರಡು ಕೈಗಳಲ್ಲಿ ಸಾಮಾನ್ಯವಾಗಿ ಪದ್ಮ ಮತ್ತು ಅಮೃತಕಲಶಗಳಿರುತ್ತವೆ. ಲಕ್ಷ್ಮಿಯನ್ನು ಚತುರ್ಭುಜಗಳನ್ನಾಗಿಯು ಚಿತ್ರಸಿ ಎರಡು ಕೈಗಳಲ್ಲಿ ಶಂಖ ಚಕ್ರಗಳನ್ನು ಸಂಕೇತಿಸಲಾಗುತ್ತದೆ.

ಆದಿಶಕ್ತಿಯು ವೈಷ್ಣವಾಯುಧಗಳನ್ನು ಹೊಂದಿರುವ ಕಾರಣ ಆಕೆಯ ಬಹುವಸ್ತುಗಳ ಪೈಕಿ ನಾಲ್ಕರಲ್ಲಿ ಶಂಖ–ಚಕ್ರ–ಗದಾ ಪದ್ಮಗಳನ್ನು ಸಂಕೇತಿಸಲಾಗುತ್ತದೆ. ಸೂರ್ಯನ ಶಿಲ್ಪಗಳು ಎರಡು ಕೈಗಳಲ್ಲಿ ಪದ್ಮವನ್ನು ಹಿಡಿದಿರುತ್ತವೆ. ಸೂರ್ಯನಿಗೆ ನಾಲ್ಕು ಕೈಗಳನ್ನು ರೂಪಿಸಿ ಅದರಲ್ಲಿ ಶಂಖ ಚಕ್ರಗಳನ್ನು ಹಿಡಿದಿರುವಂತೆ ಕತ್ತಿದರೆ ಆದು ಸೂರ್ಯನಾರಯಣನ ಲಕ್ಷಣವಾಗುತ್ತದೆ. ತಿರುಪತಿಯ ವೆಂಕಟೇಶ್ವರನ ಮೂರ್ತಿಗೆ ಶ್ರೀರಾಮನುಜಾಚಾರ್ಯರು ಶಂಖ ಚಕ್ರಗಳನ್ನು ಅಳವಡಿಸಿ ಅಲ್ಲಿ ವಿಷ್ಣುಮೂರ್ತಿಯು ಪರಿಪೂರ್ಣ ವಾಗುವಂತೆ ಮಾಡಿದರು ಎಂಬ ಹೇಳಿಕೆ ಇದೆ. ಇವೆಲ್ಲವೂ ಶಂಖ–ಚಕ್ರಾದಿಗಳಿಗೆ ವೈಷ್ಣವ ಸಂಪ್ರದಾಯವು ನೀಡಿರುವ ಮಹತ್ವಕ್ಕೆ ಉದಾಹರಣೆಗಳು. ಇದು ವಿಷ್ಣುವಿನ ಚತುರಾಯುಧಗಳ ಹಿನ್ನೆಲೆ.

**(ಮುಂದುವರೆಯುವುದು) – ಎ. ವಿಜಯಲಕ್ಷ್ಮಿ**

# ಜೀವಕ್ಕೆ ಆಯಸ್ಸು ತುಂಬುದುದಕ್ಕಿಂತ ಆಯಸ್ಸಿಗೆ ಜೀವ ತುಂಬೋಣ; ಹಿರಿಯ ಜೀವ ನಮಗೆ ಹೊರೆಯಲ್ಲ

(ಕಳೆದ ಸಂಚಿಕೆಯಿಂದ)

ಇತ್ತೀಚೆಗೆ ಯುವ ಜನರು ತಮ್ಮ ತಂದೆ ತಾಯಿಯುನ್ನು, ಹಣವನ್ನು ಚೆಲ್ಲಿ "ಓಲ್ಡ್ ಏಜ್ ಹೋಂ'ಗಳಿಗೆ ಸೇರಿಸಿಬಿಡುತ್ತಾರೆ. ಇಷ್ಟು ಸಾಲ ದೆಂಬಂತೆ, ನಗರಗಳಲ್ಲಿ ನಡೆಯುತ್ತಿರುವ ಅಪರಾಧಗಳ ಪಟ್ಟಿಯಲ್ಲಿ ಅಸಹಾಯಕ ಒಂಟಿ ವೃದ್ಧರನ್ನು, ಹಣದಾಸೆಗೆ ಕೊಲೆ ಮಾಡುತ್ತಿರುವುದನ್ನು ಆಗಾಗ್ಗೆ ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ. ಒಟ್ಟಿನಲ್ಲಿ ಜೀವಕ್ಕೆ ಭದ್ರತೆಯೇ ಇಲ್ಲವಾಗಿದೆ.

ಇಷ್ಟರ ನಡುವೆಯೂ ಇಳಿವಯಸ್ಸಿನಲ್ಲಿ ದೈಹಿಕ, ಮಾನಸಿಕ ಸ್ವಾಸ್ಥ್ಯ ಕಾಪಾಡಿಕೊಂಡು, ಇತ್ಯಾತ್ಮಕ ಸಾರ್ಥಕ ಬದುಕನ್ನು ಕಟ್ಟಿಕೊಂಡವರೂ ಇದ್ದಾರೆ. ಮಕ್ಕಳ ಮತ್ತು ತಮ್ಮ ಕಾಲಮಾನದ ತಲೆಮಾರಿನ ಅಂತರವನ್ನು (ಜನರೇಷನ್ ಗ್ಯಾಪ್) ಅರ್ಥ ಮಾಡಿಕೊಂಡು ಮಕ್ಕಳೊಂದಿಗೆ ಸಹಕರಿಸಿ ಸಾಗುವವರೂ ಇದ್ದಾರೆ. ಅಲ್ಲದೆ ಕೌಟುಂಬಿಕ ವಾತಾವರಣದಲ್ಲಿ ತಮಗೆ ಮಕ್ಕಳಿಂದ ಆದರ, ಪ್ರೀತಿ, ಗೌರವ ಇಲ್ಲದಿದ್ದರೂ ಮಕ್ಕಳಿಗೆ ಹತ್ತು ಜನರಿಂದ ದೂಷಣೆ ಬರಬಾರದೆಂದು ಸಹಿಸಿ, ಜೊತೆಯಲ್ಲೇ ಜೀವನ ಸಾಗಿಸುತ್ತಿರುವ ತ್ಯಾಗಮಯಿ ಹಿರಿಯ ಜೀವಿಗಳು ಇದ್ದಾರೆ. ಆದರೆ ಇಂತಹವರ ಸಂಖ್ಯೆ ವಿರಳ.

**ಹಿರಿಯರು ಸಮಾಜದ ಆಸ್ತಿ**

ಬಾಳಿನುದ್ದಕ್ಕೂ ಅನೇಕ ಕಷ್ಟಕಾರ್ಪಣ್ಯಗಳನ್ನು ಎದುರಿಸಿ ನಿಂತ ಹಿರಿಯ ಜೀವಿಗಳು ಅನುಭವಗಳ ಗಣಿ. ಸಂಯಮ, ವಿವೇಕಯುಳ್ಳವರು, ಬದುಕನ್ನು ಎದುರಿಸುವ ಆತ್ಮಸ್ಥೈರ್ಯವನ್ನು ರೂಢಿಸಿಕೊಂಡಿರುವವರು. ವಯಸ್ಸಾದಂತೆ ವ್ಯಕ್ತಿಗಳು ಸವಾಲುಗಳನ್ನು ಸುಲಭವಾಗಿ ಎದುರಿಸಿ ಒಂದೇ ಸನ್ನಿವೇಶವನ್ನು ಹಲವು ಆಯಾಮಗಳಿಂದ ವಿಶ್ಲೇಷಿಸುವ ಸಾಮರ್ಥ್ಯಗಳಿಸುತ್ತಾರೆ. ಭಾವತೀವ್ರತೆ ಎದುರಿಸುತ್ತಲೇ ನಿರ್ಲಿಪ್ತರಾಗಿರುವುದನ್ನು ಅನುಭವದಿಂದ ಮಾತ್ರ ಕಲಿಯಲು ಸಾಧ್ಯ. ಸೋಲು ಬದುಕಿನ ಅಂತ್ಯವಲ್ಲ ಎನ್ನುವುದನ್ನು ಅರಿತುಕೊಳ್ಳುತ್ತಾರೆ. ಲೈಟರ್ ಆಸ್ ವಿ ಗೋ ಎಂಬುದನ್ನು ಆದರೆ ಹಿರಿಯರನ್ನೇ ಸರಕು ಎಂಬಂತೆ ಭಾವಿಸಿ (ಕಮೋಡಿಟಿ) ಆಸ್ತಿ, ಪಿಂಚಣಿ, ಸೇವೆ ಮಾತ್ರ ಪಡೆಯುವುದಕ್ಕೆ ಮೀಸಲಾಗಿರಿಸಿಕೊಂಡು ನಂತರ ಅವೆಲ್ಲವೂ ಖಾಲಿಯಾದ ಮೇಲೆ ಮನೆಯ ಇತರೆ ವಸ್ತುಗಳನ್ನು ಲಂಬರ್ ರೂಂನಲ್ಲಿ ಹಾಕಿಬಿಡುವಂತೆ ಮೂಲೆಗುಂಪಾಗಿ ಮಾಡಕೂಡದು. – **ಶ್ರೀನಿವಾಸ್ ಡಿ.ಕೆ.**

## ನೂತನ ಜೋಡಿಗೆ ಶುಭಾಶಯಗಳು



ನಮ್ಮ ಪತ್ರಿಕೆಯ ಓದುಗರಾದ ಶ್ರೀ ಎನ್. ನಾಗರಾಜು ಮತ್ತು ಶ್ರೀಮತಿ ರಮಾ, ಮೈಸೂರುರವರ ಜೇಷ್ಠ ಪುತ್ರ ಎನ್. ನವೀನ್‌ಕುಮಾರ್‌ರವರು ಶ್ರೀ ಎ. ರವಿ ಮತ್ತು ಶ್ರೀಮತಿ ಭಾರತಿರವರ ಜೇಷ್ಠ ಪುತ್ರಿ ಆರ್. ರಕ್ಷಿತರವರನ್ನು 30.8.2018ರಂದು ಮೈಸೂರಿನ ಮಾಧವ ಶೆಣೈ ಕಲ್ಯಾಣಮಂಟಪದಲ್ಲಿ ವಿವಾಹವಾದರು. ನವಜೋಡಿಗೆ ಶ್ರೀ ಚಾಮುಂಡೇಶ್ವರಿ ದೇವಿ ಸಕಲ ಸಂಪತ್ತನ್ನು ನೀಡಲಿ ಹಾಗೂ ಸುಖಕರ ಜೀವನ ನಡೆಸಲಿ ಎಂದು ಮ.ವಿ. ಬಳಗ ಶುಭವನ್ನು ಕೋರಿದೆ.

WISH YOU ALL OF THEM SEPTEMBER 2018 HAVE A VERY HAPPY BIRTHDAY. GOD BLESS YOU. ALL YOUR DREAMS TO BE FULLFILLED. HAVE A NICE DAY AND KEEP ALWAYS LAUGHING IN YOUR LIFE

| | |
|---|---|
| 1 Nirmala | Hassan |
| 2 Pankaja | Mysuru |
| 3 Shantha | Mangalore |
| 4 Ganga | Tumkur |
| 5 Janaki | Vellur |
| 6 Prasiddi | Poona |
| 7 Chandrika | Bellary |
| 8 Rashmi | New Dellhi |
| 9 Bharathi | Shimoga |
| 10 K. Lakshmipriya | IAS Officer |
| 11 Kamala | Bangaluru |
| 12 Shilaja | Ooty |
| 13Lakshmi | Hospet |
| 14 Gunjan Krishna | IAS Officer |
| 15 Gurneet Taj | IAS Officer |
| Nandini K.R. | IAS Officer |
| 16 Meenakshi | Kollar |
| 17 Prithi | Jhansi |
| 18 Akriti Sagar | IAS Officer |
| 19 B Fouzia Taranum | IAS Officer |
| 20 Lolakshi | Tumkur |
| 21 Brunda | Mandya |
| 22 S. Honnamba | IAS Officer |
| 23 Kusuma | Mysuru |
| 24 Uma Mahadevaiah | IAS Officer |
| 25 Usha | Kolar |
| 26 Tulasi | Ahmadabad |
| 27 Anjali | Varanashi |
| 28 Fathima | Hydrabad |
| 29 Sugandhini | Mysuru |
| 30 Neelambika | Bijapur |

## ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ

**1. ಹೇಮಂತ್, ಶಿವಮೊಗ್ಗ**

'ಪತ್ನಿಯರೇ ಹುಷಾರ್' ಎಂಬ ಕಾದಂಬರಿಗೆ ದಯಮಾಡಿ ಮುನ್ನುಡಿ ಬರೆದುಕೊಡ್ತೀರಾ ?

– ಖಂಡಿತವಾಗಲು ಏಕ ಪತ್ನಿವ್ರತಸ್ಥರಿಂದ ಸಾಧ್ಯವಿಲ್ಲ.. ಯಾರಾದರೂ ರಾಜಕೀಯದವರನ್ನ ಟ್ರೈ ಮಾಡಿ,

**2. ರತ್ನ, ಕೋಲಾರ**

ಗಂಡ ಹೆಂಡತಿ ಜಗಳ ಉಂಡು ಮಲಗೋತನಕ ಅಂತಾರೆ, ಇಂದಿಗೆ ಅನ್ನಬಹುದೇ?

– ಆಗಲ್ಲ. ಏಕೆಂದರೆ ಈಗ ಜಗಳ ಆಡೋಕೆ ಮನೇಲೇ ಇರಲ್ಲ. ಹಾಗೂ ಒಟ್ಟಿಗೆ ಮಲಗೋಕ್ಕೆ ಶಿಫ್ಟ್ ಬಿಡಲ್ಲ

**3. ಪ್ರಕಾಶ, ರಾಯಚೂರು**

ಹೆಣ್ಮಕ್ಕಳಿಗೆ ವಿಜ್ಞಾನ ತಲೆಗೆ ಹತ್ತುವುದಿಲ್ಲವಂತೆ ಹೌದಾ?

– ಹಾಗಂತ ಹೇಳಿದವರ್‍ಯಾರು? ಕೆಲವರಿಗೆ ವಿಜ್ಞಾನ ತಲೆಗೆ ಹತ್ತಿ ಏನಾಗಬೇಕು?. ಆದರೆ ಅವರ ಗಂಡನ ತಲೆ ಮೇಲೆ ಹತ್ತಿ ಕೂತಿರುವುದನ್ನು ಕಲಿತಿದ್ದಾರಲ್ಲ.

**4. ನಂಜಪ್ಪ, ಮಳವಳ್ಳಿ**

ಹಿಂದಿನ ಪ್ರಭುಗಳಿಗೂ ಈಗಿನ ರಾಜಕಾರಣಿಗಳಿಗೂ ವ್ಯತ್ಯಾಸವೇನು?

– ಹಿಂದೆ ಕೆಲವು ಪ್ರಭುಗಳು ಹೆರಿಗೆ ಕಳ್ಳರಾಗಿದ್ದರು: ಈಗಿನ ರಾಜಕಾರಣಿಗಳಲ್ಲಿ ಕೆಲವರು ತೆರಿಗೆ ಕಳ್ಳರು!

**5. ಪುರುಷೋತ್ತಮ, ಬಳ್ಳಾರಿ**

ಪುರುಷರಿಗಿಂತ ಮಹಿಳೆಯರು ಸ್ಟ್ರಾಂಗು ಎನ್ನುವುದಕ್ಕೆ ಒಲಂಪಿಕ್ ಪದಕಗಳೇ ಸಾಕ್ಷಿ ಅಲ್ಲವೇ?

– ಒಲಂಪಿಕ್ ಪದಕವೇಕೆ ಬೇಕು? ಮನೆಯಲ್ಲಿ ತದುಕುವುದನ್ನು ನೋಡಿದರೆ ಗೊತ್ತಾಗುತ್ತಲ್ಲವೇ?

**6. ಶೇಖರ್ ಹಾಸನ**

ನದಿಗಳಿಗೆ ಹೆಣ್ಣಿನ ಹೆಸರು : ಬೆಟ್ಟಗಳಿಗೇಕೆ ಗಂಡಸರ ಹೆಸರು?

– ನದಿ ತವರಿನಿಂದ ಬೇರೆಡೆಗೆ ಸಾಗುವ ಹೆಣ್ಣು: ಬೆಟ್ಟ ಇದ್ದಲ್ಲೇ ಬಿದ್ದಿರುವ ಗಂಡು.

**7. ಮಧುಸೂಧನ್, ಬಂಗಾರಪೇಟೆ**

ನೂರಾರು ಕೋಟಿ ಜನಸಂಖ್ಯೆಯಿರುವ ನಮ್ಮ ದೇಶದಲ್ಲಿ ನನಗೆ ಒಂದು ಹುಡುಗಿ ಸಿಗುತ್ತಿಲ್ಲವಲ್ಲ ಸ್ವಾಮಿ?

– ಸಿಗೋ ಹುಡುಗಿಯರನ್ನು ಸೆಟ್ ಮಾಡಿಕೊಳ್ಳುವುದನ್ನು ಕಲಿಯಬೇಕು.

**8. ವೀರಣ್ಣ, ಹುಬ್ಬಳ್ಳಿ**

ವಿಕ್ರಮ–ಬೇತಾಳರ ಕತೆಗಳು ಈಗ ಯಾಕಿಲ್ಲ?

– ವಿಕ್ರಮರು ಕಮ್ಮಿಯಾಗಿ ಬೇತಾಳರು ಜಾಸ್ತಿಯಾಗಿದ್ದರಲ್ಲ ಏನ್ಮಾಡೋದು?

**9. ಸರೋಜ, ಊಟ**

ಇದ್ದುದರಲ್ಲಿ ಸಣ್ಣ ಜೀವಿಯಾದ ಇರುವೆ ಕೂಡಾ ಮನುಷ್ಯರಿಗೆ ಹೆದರುವುದಿಲ್ಲವಲ್ಲ?

– ಹೆಂಡತಿಯೇ ಹೆದರೊಲ್ಲ ಎಂದ ಮೇಲೆ ಇರುವೆ ತಾನೆ ಯಾಕೆ ಹೆದರುತ್ತದೆ?

**10 ಚಂದನ್, ಬೆಂಗಳೂರು.**

ಪ್ರೇಯಸಿಯ ಮೇಲಿನ ಪ್ರೀತಿಗೂ, ಪತ್ನಿಯ ಮೇಲಿನ ಪ್ರೀತಿಗೂ ಏನು ವ್ಯತ್ಯಾಸ?

– ಅರ್ಥ ಮಾಡಿಕೊಳ್ಳಿ. ಒಂದು ಕಾರಂಜಿ: ಇನ್ನೊಂದು ಪ್ರಶಾಂತವಾದ ನದಿ.

# ಸ್ತ್ರೀ ಪುರುಷರಲ್ಲಿನ ಸ್ವಭಾವಜನ್ಯ ವ್ಯತ್ಯಾಸಗಳು

ಸ್ತ್ರೀ ಮತ್ತು ಪುರುಡ ಒಬ್ಬರಿಗೊಬ್ಬರು ಪೂರಕ, ಆದರೂ ಒಂದೇ ರೀತಿಯ ಕೆಲಸವನ್ನು ಅವರು ಮಾಡುವ ರೀತಿ ಬಿನ್ನವಾಗಿದೆ. ಅವರು ಹಾಗಬೇಕೆಂದೇ ಮಾಡುವುದಿಲ್ಲ. ಇದು ಪ್ರಕೃತಿದತ್ತ ವಾಗಿದೆ ಮತ್ತು ಅದರ ಮೇಲೆ ಯಾವ ಒತ್ತಡವೂ ಇಲ್ಲ. ಆದರೆ ಗಂಡಸು ಅಂಥ ವಿಚಾರಗಳನ್ನು ಪ್ರಚಾರ ಮಾಡಲು ಯತ್ನಿಸುತ್ತಾರೆ.

• ಬುದ್ಧಿವಂತಿಕೆ ಪರೀಕ್ಷೆಯ ಸಮಯದಲ್ಲಿ ಕಂಡಿರುವದೇನೆಂದರೆ ಹುಡಿಗಿಯರು ಮೌಖಿಕ ಪರೀಕ್ಷೆಯಲ್ಲಿ ಚೆನ್ನಾಗಿ ಮಾಡುತ್ತಾರೆ. ಆದರೆ ಹುಡುಗರು ಬೇರೆ ರೀತಿಯ ಪರೀಕ್ಷೆಗಳಲ್ಲಿ ತಮ್ಮ ಜಾಣತನ ಪ್ರದರ್ಶಿಸುತ್ತಾರೆ.

• ಪಶ್ಚಿಮ ಜರ್ಮನಿಯ ಮ್ಯೂನಿಕ್ ನಲ್ಲಿ ಒಂದು ಡಿಪಾರ್ಟ ಮೆಂಟಲ್ ಸ್ಟೋರಿನಲ್ಲಿ ಒಂದು ಕನ್ನಡಿಯನ್ನು ಇಡಲಾಯಿತು. ಅದರ ಮುಂದೆ ಹಾದು ಹೋಗುವ ಸ್ತ್ರೀ ಪರುಷರನ್ನು 8 ಗಂಟೆಗಳ ಕಾಲ ಅಧ್ಯಯನ ಮಾಡಿದಾಗ ತಿಳಿದು ಬಂದು ದೇನೆಂದರೆ 1620 ಮಹಿಳೆಯರು ಕನ್ನಡಿಯ ಮುಂದಿನಿಂ ಹಾದು ಹೋದರು. ಅವರಲ್ಲಿ ಸುಮಾರು 1/3 ರಷ್ಟು ಜನ ಅಲ್ಲಿ ನಿಂತು ತಮ್ಮನ್ನು ತಾವು ನೋಡಿ ಕೊಂಡರು. ಆದರೆ 600 ಜನ ಪುರುಷರಲ್ಲಿ ಎಲ್ಲರೂ ಕನ್ನಡಿಯಲ್ಲಿ ತಮ್ಮನ್ನು ಸರಿಯಾಗಿ ನೋಡಿಕೊಂಡರು ಮತ್ತು ಯಾರು ತಮ್ಮನ್ನು ಇಮನಿಸುತ್ತಿಲ್ಲವಷ್ಟೆ ಎಂಬುದನ್ನೂ ಖಚಿತಪಡಿಸಿಕೊಂಡಿದ್ದರು.

• ನೀನು ಬನ್ನ್ನು ಎಲ್ಲಿಂದ ಖರೀದಿಸಿದಿರಿ ಎಂದು ಯಾವುದೇ ಪುರುಷನನ್ನು ಕೇಳಿ ನೋಡಿ, ಅವನು ತಕ್ಷಣ ಎಲ್ಲಿಂದ ಖರೀದಿಸಿದ್ದ ಎಂಬುದನ್ನು ತಿಳಿಸುತ್ತಾನೆ. ಅದೇ ಪ್ರಶ್ನೆಯನ್ನು ನೀವು ಒಬ್ಬ ಮಹಿಳೆಗೆ ಕೇಳಿದರೆ ಈ ಬನ್ ನಲ್ಲಿ ಏನಾದರೂ ದೋಷ ವಿದೆಯೇ ಎಂದು ನಿಮಗೇ ಪ್ರಶ್ನೆ ಹಾಕುತ್ತಾಳೆ.

• ಹೆಂಗಸರಿಗೆ ಹೋಲಿಸಿದರೆ ಪುರುಷರ ದೃಷ್ಟಿ ಚೆನ್ನಾಗಿರುತ್ತದೆ. ಆದರೂ ಬಹಳಷ್ಟು ಬಹಳಷ್ಟು ಬಹಿಳೆಯರು ಕತ್ತಲೆಯಲ್ಲೂ ಯಾವುದೇ ವಸ್ತುಗಳನ್ನು ಕಾಣಬಲ್ಲರು. ಅವರಿಗೆ ಬಣ್ಣ ಕುರುಡು ರೋಗ ಬರುವುದು ಅಪರೂಪ.

• ವಿಧುರನಿಗಿಂತ ವಿಧವೆ ಹೆಚ್ಚು ಕಾಲ ಜೀವಿಸಬಲ್ಲಳು, ಯಾಕೆಂದರೆ ಆಕೆ ಕುಟುಂಬದ ಇತರ ಸದಸ್ಯರೊಡನೆ ಬಹಳ ಬೇಗ ಹೊಂದಿಕೊಳ್ಳುತ್ತಾಳೆ.

• ಚಿಕಿತ್ಸಾ ವಿಶೇಷಜ್ಞರ ಒಂದು ರೀಸರ್ಚ್ ಒಂದು ರೀಸರ್ಚ್ ಪ್ರಕಾರ, ಪ್ರತಿದಿನ ಪುರುಷರು ಮಹಿಳೆಯರಿಗಿಂತ 25 ನಿಮಿಷ ಕಡಿಮೆ ನಿದ್ರೆ ಮಾಡುತ್ತಾರೆ. ಪ್ರಸಿದ್ಧ ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್‌ನ ಪ್ರಕಾರ ಮಹಿಳೆಯರ ಕನಸಿನಲ್ಲಿ ಬಂಧುಗಳು ಮತ್ತು ಸ್ನೇಹಿತರು ಕಾಣಿಸುತ್ತಾರೆ. ಆದರೆ ಪುರುಷರ ಕನಸಿನಲ್ಲಿ ಹೊಸ ಹೊಸ ಪರಿಚಿತ ಸ್ತ್ರೀಯರು ಕಾಣಿಸುತ್ತಾರೆ.

• ಅಂಕಿ–ಸಂಖ್ಯೆಗಳ ಪ್ರಕಾರ ಕಳೆದ 190 ವರ್ಷಗಳಲ್ಲಿ ಮಹಿಳೆಯರ ಆಯುಸ್ಸು ಸರಾಸರಿ 42 ವರ್ಷಗಳಿಂದ 74 ವರ್ಷಗಳಿಗೆ ಏರಿದೆ. ಆದರೆ ಗಂಡಸರ ಅಯುಸ್ಸು 40ರಿಂದ 68 ವರ್ಷಕ್ಕೆ ಏರಿದೆ.

• ಚಿಕಿತ್ಸಕರ ಅನುಸಾರ ಮಹಿಳಾ ರೋಗಿಗಳು ಪುರುಷರಿಗಿಂತ ಹೆಚ್ಚು ಸಹಕಾರ ಕೊಡವುದು ಸಾಬೀತಾಗಿದೆ. ಅವರಿಗೆ ಇಗರರಿಗಿಂತ ಹೆಚ್ಚು ಸಹಕಾರ ಕೊಡವುದು ಸಾಬೀತಾಗಿದೆ. ಅವರಿಗೆ ಇತರರಿಗಿಂತ ಕಡಿಮೆ ಶುಶ್ರೂಷೆಯ ಅವಶ್ಯಕತೆ ಬೀಳುತ್ತದೆ. ಆದರೆ ಪುರುಷ ರೋಗಿಯಲ್ಲಿ ಈ ಗುಣ ಕಾಣಿಸುವುದಿಲ್ಲ. ಪುರುಷರಿಗೆ ಜಾಸ್ತಿ ಸೇವೆಯ ಅವಶ್ಯಕತೆ ಇರುತ್ತದೆ.

• ಕಲ್ಲನ್ನು ದೂರ ಎಸೆಯುವುದರಲ್ಲಿ ಮಹಿಳೆಯರು ತಮ್ಮ ಕೈಯನ್ನು ಬೀಸುವಾಗ ತಮ್ಮ ತಲೆಯ ಮೇಲೆ ತೆಗೆದುಕೊಂಡು ಎಸೆಯುವ ಪ್ರಯತ್ನ ಮಾಡುತ್ತಾರೆ. ಪುರುಷ ತನ್ನ ಭುಜ ಮತ್ತು ಮಣಿಕಟ್ಟುಗಳಿಂ ಬಲಗಡೆಗೆ ವಾಲಿಕೊಂಡು ಕಲ್ಲು ಎಸೆಯುತ್ತಾನೆ.

• ಜೂಜಿನಲ್ಲಿ ವಿಜಯಿಯಾದೊಡನೆ ಮಹಿಳಾ ಆಟಗಾರ್ತಿ ಪುರುಷರಿಗೆ ಹೋಲಿಸಿದರೆ ಬೇಗ ಆಟದಿಂದ ಹಿಂದಕ್ಕೆ ಸರಿಯುತ್ತಾಳೆ. ಆದರೆ ಮಹತ್ವಾಕಾಂಕ್ಷಿಯಾಗಿರುವ ಪುರುಷ ಹೆಚ್ಚು ಗೆಲ್ಲುವ ಆಸೆಯಿಂದ ಮತ್ತೆ ಮತ್ತೆ ಆಟವಾಡಿ ಗೆದ್ದಿದ್ದನ್ನು ಕಳೆದುಕೊಳ್ಳುತ್ತಾನೆ.

• ಮನೆಗೆ ಬಂದಾಗ ಬಾಗಿಲು ತಲುಪುವ ಮೊದಲೇ ಗಂಡಸು ಬಾಗಿಲಿನ ಕೀಲಿ ಕೈ ಹೊರಗೆ ತೆಗೆಯಲು ಪ್ರಯತ್ನಿಸುತ್ತಾನೆ. ಆದರೆ ಮಹಿಳೆ ಬಾಗಿಲ ಬಳಿ ಬಂದ ಮೇಲೆ ಹಾಗೆ ಮಾಡುತ್ತಾಳೆ.

• ಮಹಿಳೆಯರ ಸ್ವಭಾವ ಬಹಳ ಕೋಮಲ ವಾಗಿರುತ್ತದೆ ಮತ್ತು ಸ್ವಲ್ಪ ಹೆಚ್ಚು ಕಡಿಮೆಯಾದರೂ ಅವರಿಗೆ ಸಂಶಯ ಹುಟ್ಟುತ್ತದೆ, ಭಯ ಕಾಡ ತೊಡಗುತ್ತದೆ.

–ಎಂ.ಜಿ. ವತ್ಸಲಾ,
ಬೆಂಗಳೂರು

## ಇಲ್ಲಿದೆ ನೋಡಿ ನೀವೆಷ್ಟು ಪದ ಬರೆದಿದ್ದೀರೆಂದು ಎಣಿಸಿ ಹೇಳುವ ಪೆನ್!



ಜಮ್ಮು ಕಾಶ್ಮೀರದ ಗುರೇಝ್ ಕಣಿವೆ ಪ್ರದೇಶದ 9 ವರ್ಷದ ಬಾಲಕ ಮುಜಾಫರ್ ಅಹ್ಮದ್ ಖಾನ್ ನೂತನ ಪೆನ್ ಒಂದನ್ನು ಆವಿಷ್ಕರಿಸಿದ್ದಾನೆ. ಈ ಪೆನ್ ನೀವೇನು ಬರೆದರೆ ನೀವು ಬರೆದ ಪದಗಳೆಷ್ಟು ಎನ್ನುವುದನ್ನು ಎಣಿಕೆ ಮಾಡಿ ಹೇಳಲಿದೆ!

"ಪೆನ್ನಿನ ಹಿಂಭಾಗದಲ್ಲಿ ಕವಚವಿದ್ದು ಯಾರೇ ಆಗಲಿ ಬರೆಯಲಾರಂಭಿಸಿದಾಗ ಅವರು ಬರೆದ ಪದಗಳ ಎಣಿಕೆಗೆ ತೊಡಗುತ್ತದೆ. ಇದಕ್ಕೆ ಲಗತ್ತಿಸಲಾದ ಸಣ್ಣ ಎಲ್ಸಿಡಿ ಮಾನಿಟರ್ ನಲ್ಲಿ ಈ ಸಂಖ್ಯೆ ಪ್ರದರ್ಶನಗೊಳ್ಳಲಿದೆ.ಇದನ್ನು ಮೊಬೈಲ್ ಫೋನ್‌ನ ಸಂದೇಶದ ಮೂಲಕವೂ ಕಾಣಬಹುದಾಗಿದೆ" ಮುಜಾಫರ್ ಹೇಳಿದ್ದಾರೆ.

ನಾನು ಶಾಲೆಯಲ್ಲಿ ಕಡಿಮೆ ಅಂಕಗಳಿಸಿದ್ದಾಗ ನನ್ನ ತಲೆಯಲ್ಲಿ ಈ ಪದ ಎಣಿಕೆಯ ಪೆನ್ ಬಗ್ಗೆ ಯೋಚನೆ ಹೊಳೆದಿತ್ತು. "ತರಗತಿಯ ಪರೀಕ್ಷೆಯೊಂದರಲ್ಲಿ ನನಗೆ ಕಡಿಮೆ ಅಂಕ ಬಂದಿತ್ತು. ಶಿಕ್ಷಕರು ನೀನು ಕಡಿಮೆ ಬರೆದಿದ್ದೀಯೆ ಅದಕ್ಕೆ ಕಡಿಮೆ ಅಂಕ ಬಂದಿದೆ ಎಂದಿದ್ದರು. ಎಂದು ಹೀಗಾಗಿತ್ತೋ ಅಂದಿನಿಂದಲೂ ನನಗೆ ಈ ಪದಗಳ ಎಣಿಕೆ ಪೆನ್ ಬಗ್ಗೆ ಯೋಚನೆ ಪ್ರಾರಂಭವಾಗಿತ್ತು. ನಾನು ಇದನ್ನು ಆವಿಷ್ಕರಿಸಲು ಅದೇ ಕಾರಣವಾಗಿದೆ." ಅವರು ಹೇಳಿದ್ದಾರೆ.

ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಹಯೋಗದಲ್ಲಿ ನ್ಯಾಷನಲ್ ಇನ್ನೋವೇಶನ್ ಫೌಂಡೇಶನ್ (ಎನ್‌ಐಎಫ್) ಆಯೋಜಿಸಿದ ಫೆಸ್ಟಿವಲ್ ಆಫ್ ಇನ್ನೋವೇಶನ್ ಅಂಡ್ ಎಂತ್ರಪನ್ನರ್ಶಿಪ್ ಕಾರ್ಯಕ್ರಮದಲ್ಲಿ ಈ ಬಾಲಕನ ಪೆನ್ ಪ್ರದರ್ಶನಗೊಂಡಿತ್ತು.

ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ಮೆಚ್ಚುಗೆ ಮಾತುಗಳನ್ನು ಆಡಿದ್ದರಲ್ಲದೆ ಮುಜಾಫರ್ ಅವರಿಗೆ ಬಹುಮಾನವನ್ನೂ ನೀಡಿದ್ದರು.

ಈ ಪೆನ್ ಮೇ ತಿಂಗಳಿನಿಂದ ಮಾರುಕಟ್ಟೆಯಲ್ಲಿ ಲಭ್ಯವಾಗಲಿದೆ.ಎಂದಿರುವ ಮುಜಾಫರ್ ಎನ್‌ಐಎಫ್ ಈಗಾಗಲೇ ಪೆನ್ ಅನ್ನು ಮಾರುಕಟ್ಟೆಗೆ ಬಿಡಲು ನಿರ್ಧರಿಸಿದೆ ಎಂದಿದ್ದಾರೆ.

**–ರೂಪ, ಮೈಸೂರು**

## ರೀ... ಸ್ವಲ್ಪ ನಗೀ ಪ್ಲೀಸ್




## The ABC of Happiness

A- Argue less, Affirm More!
B- Bargain less, Believe More!
C- Complain less, Compliment More!
Today onwords let's follow the ABC's Happiness

* * *

## Think and Act

How others see you isn't important,
How you see yourself means everything

**ಮಹಿಳಾ ವಿಶೇಷ**

ನಂ. 136, ಶ್ರೀ ನೀಲಕಂಠಸ್ವಾಮಿ ಮಠ,
ಗನ್‌ಹೌಸ್ ಎದುರು, ಖಿಲ್ಲೆ ಮೊಹಲ್ಲಾ,
ಮೈಸೂರು 570004,
**ಮೊ: 9243584444**

RNI No. KARKAN/2015/71642 KA/SK/MYS/109/2017-2019

# ಬೆಳಗಲಿ ಭಾರತ

ಈ ಘೋಷಣೆಯಡಿಯಲ್ಲಿ ಸ್ವಯಂ ಉದ್ಯೋಗ, ಪಾರ್ಟ್ ಟೈಂ, ಫುಲ್ ಟೈಂ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿರುವ ಮಹಿಳೆಯರಿಗೆ/ಪುರುಷರಿಗಾಗಿ, ವಯಸ್ಸಿನ ಅಂತರವಾಗಲಿ, ವಿದ್ಯಾರ್ಹತೆಯಾಗಲಿ ಅವಶ್ಯಕತೆ ಇಲ್ಲ. ನಂಬಿಕೆ, ಛಲ ಹಾಗೂ ಸತತ ಪ್ರಯತ್ನಪಡುವವರು ಆರ್ಥಿಕವಾಗಿ ಮೇಲೆ ಬರಲು ಸುವರ್ಣಾವಕಾಶ. ನಿಮ್ಮ ಜೀವನ ಶೈಲಿ ಬದಲಾಗಲು ಸುವರ್ಣಾವಕಾಶ.






ನಿಮ್ಮ ಮೂಲ ಹಣವು ರೂ. 250ರಲ್ಲಾಗಲಿ, ರೂ. 500ರಲ್ಲಾಗಲಿ, ರೂ. 1,000 ದಲ್ಲಾಗಲಿ, 1,500ರಲ್ಲಾಗಲಿ, ರೂ. 2,520 ರಲ್ಲಾಗಲಿ, ಅಥವಾ 5,000ದಲ್ಲಾಗಲಿ ವ್ಯವಹಾರವನ್ನು ಆರಂಭಿಸಿದಲ್ಲಿ ನಿಮ್ಮ ಜೀವನವು ತೃಪ್ತಿಯಿಂದಿರಲು ಸಾಧ್ಯ. ಅಸಾಧ್ಯವೆನ್ನುವವರು ಬನ್ನಿ ನಮ್ಮ ಜೊತೆ ಕೈಜೋಡಿಸಿ ಸಾಧಿಸಿ ತೋರಿಸಿ. ಸಾಧ್ಯವೆನ್ನುವವರು ನಿಮ್ಮ ಜೀವನ ಶೈಲಿಯನ್ನು 3–6 ತಿಂಗಳಲ್ಲಿ ಬದಲಾವಣೆಯನ್ನು ಕಾಣಿರಿ. ಯಾರಿಗಾದರೂ ಆಸಕ್ತಿ ಇದ್ದಲ್ಲಿ ಸಲಹೆ, ಮಾರ್ಗದರ್ಶನಕ್ಕಾಗಿ ಕೆಳಗಿನ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಿ.

**Mob: 9243584444/ 9901832230/ 9686205115/ 6360470899**

Book Post

To

From
Mahila Vishesha
No. 136, Sri Neelakantamutt
Opp. to Gunhouse, Kille Mohalla
Mysuru - 570004

Edited, Published and Owned by H.V.Venkatasubbarao, No.1021, 14th Cross, 2nd Stage, Hebbal, Mysore- 570017 and Printed by B.S.Meera and Printed at Annapuoorna Offset Printers, No.511, 14th Main, Saraswathipuram, Mysore-570009
Published at No.1021, 14th Cross, 2nd Stage, Hebbal, Mysore-570017. Email:mahilavishesha15@gmail.com Web:www.mahilavishesha.in Editor:H.V.Venkatasubbarao Mob: 8880334444 / 9243584444 RNI No:KARKAN/2015/71642